ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

**SARAYU** - Kannada Monthly Regn. No. KARKAN/2014/62363

April 2016 Vol. : 2 Issue : 12 5117/ದುರ್ಮುಖ ಸಂವತ್ಸರ ಎಪ್ರಿಲ್ 2016 ಪುಟ 8

Postal Regn No. PTR/133/2015-17
Licensed to Post without pre-payment.
License No.: SK/WPP/PTR/177/2015-17


## ಭಕ್ತಿ ಭಾವಪರವಶತೆಗಳ

# ಸರಸ್ವತಿ ಪೂಜೆ



ಶಾಲೆಯು ಸಂಸ್ಕೃತಿಯನ್ನು ಉಳಿಸುವ ಸರಸ್ವತಿ ಮಂದಿರವಾಗಿದೆ. ಲೌಕಿಕ ವಿದ್ಯೆಯೊಂದಿಗೆ ಆಧ್ಯಾತ್ಮಿಕ ಶಿಕ್ಷಣವೂ ಇಂದಿನ ಅವಶ್ಯಕತೆಯಾಗಿದೆ. ಪ್ರಕೃತಿ ಸಹಜವಾದ ಭಾವನಾತ್ಮಕ ಬೆಳವಣಿಗೆಗೆ ಉತ್ತಮ ಸಂಸ್ಕಾರ ನೀಡಬೇಕು. ನಮ್ಮತನ ಹಾಗೂ ಸ್ವಾಭಿಮಾನ ಭರಿತವಾದ, ಸಮಾಜದ ಋಣವನ್ನು ತೀರಿಸುವ ಶಿಕ್ಷಣ ಶಾಲೆಯಲ್ಲಿ ಎಲ್ಲಾ ಮಕ್ಕಳಿಗೂ ಸಿಗುವಂತಾಗಬೇಕು ಎಂದು ಉಡುಪಿ ಹಂಗಾರಕಟ್ಟೆ ಬಾಳೆಕುದ್ರು ಶ್ರೀಮಠದ ಶ್ರೀ ನೃಸಿಂಹಾಶ್ರಮ ಮಹಾಸ್ವಾಮೀಜಿ ಹೇಳಿದರು. ಅವರು ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರದ ವತಿಯಿಂದ 22–02–2016 ರಂದು ಸೋಮವಾರ ಏರ್ಪಡಿಸಲಾದ ಸಾಮೂಹಿಕ ಸರಸ್ವತಿ ಪೂಜಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡಿದರು.

ಮುಖ್ಯ ಅತಿಥಿಯಾಗಿ ವಿದ್ಯಾಭಾರತಿ ಕರ್ನಾಟಕದ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಪ್ರಮುಖ ರಾಜಾರಾಮ ಹೊಳೆಹೊನ್ನೂರು ಮಾತನಾಡಿದರು. ವಿದ್ಯಾರ್ಥಿಗಳು ಶ್ರದ್ಧೆ ಮತ್ತು ಭಕ್ತಿಯಿಂದ ಜ್ಞಾನ ಮತ್ತು ಉತ್ತಮ ಗುಣಗಳನ್ನು ಬೆಳೆಸಿಕೊಳ್ಳಬೇಕು. ಸರಸ್ವತಿ ಮಾತೆಯು ಏಕಾಗ್ರತೆ, ಪರಂಪರೆಯ ಜ್ಞಾನ ಹಾಗೂ ಸಾಮರಸ್ಯದ ಸಂಕೇತ ಎಂದು ನುಡಿದ ಅವರು ವಿದ್ಯಾಭಾರತಿ ಶಾಲೆಗಳಲ್ಲಿ ಸಂಸ್ಕಾರ ಸಹಿತ ಶಿಕ್ಷಣ ನೀಡುವ ವ್ಯವಸ್ಥೆಯಿದೆ ಎಂದರು. ವಿದ್ಯಾರ್ಥಿಗಳು ಪ್ರಯತ್ನ ಶೀಲರಾದಾಗ ಯಶಸ್ಸು ನಿಶ್ಚಿತವಾಗಿ ಲಭಿಸುತ್ತದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಶ್ರೀರಾಮ ವಿದ್ಯಾಕೇಂದ್ರ ಸಂಚಾಲಕ ಡಾ। ಪ್ರಭಾಕರ ಭಟ್ ಉಪಸ್ಥಿತರಿದ್ದರು. ನಾರಾಯಣ ಸೋಮಯಾಜಿ ಅಧ್ಯಕ್ಷತೆ ವಹಿಸಿದ್ದರು. ಕಶೆಕೋಡಿ ಸೂರ್ಯನಾರಾಯಣ ಭಟ್ ಪೌರೋಹಿತ್ಯದಲ್ಲಿ ಸಾಮೂಹಿಕ ಸರಸ್ವತಿ ಪೂಜೆ ನಡೆಯಿತು. ವಿದ್ಯಾಕೇಂದ್ರದ ಮೂರು ಸಾವಿರ ವಿದ್ಯಾರ್ಥಿಗಳು ಸರಸ್ವತಿ ಭಾವಚಿತ್ರವನ್ನು ಮುಂದಿಟ್ಟುಕೊಂಡು ಸರಸ್ವತಿ ಮಾತೆಗೆ ಪುಷ್ಪಾರ್ಚನೆ ಮಾಡಿ ಮಂತ್ರ ಪಠಿಸಿದರು. ಮಾಘ ಮಾಸದ ಶುಕ್ಲ ಪಕ್ಷದ ಹುಣ್ಣಿಮೆಯಂದು ನಡೆದ ಈ ಪೂಜೆಯಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳು ಮಾಘ ಶುಕ್ಲ ಪ್ರತಿಪದೆಯಿಂದ ಮಾಸಾಂತ್ಯದವರೆಗೆ ಪ್ರತಿದಿನ ಅಷ್ಟೋತ್ತರ ಜಪದಲ್ಲಿ ಭಾಗಿಗಳಾಗಿದ್ದರು.



# ಪ್ರಾಮಾಣಿಕತೆ

ಚಿಂತನರಶ್ಮಿ

ಒಂದು ಬಾರಿ ಒಬ್ಬ ಧರ್ಮಗುರುವಿಗೆ ಹೃದಯ ರೋಗ ಬಂದಿತು. ವೈದ್ಯರು ಪರೀಕ್ಷೆ ಮಾಡಿ ಇದು ರಿಪೇರಿಯಾಗುವ ಹೃದಯವಲ್ಲ, ಬದಲಾಯಿಸಲೇ ಬೇಕು ಎಂದುಕೊಂಡರು. ಆದರೆ ಹೃದಯವನ್ನು ಯಾರು ದಾನ ಮಾಡಿಯಾರು? ಎಲ್ಲರಿಗೂ ಇರುವುದೇ ಒಂದು ಹೃದಯ. ಆದರೆ ವೈದ್ಯರಿಗೆ ಆಶ್ಚರ್ಯ. ವಿಷಯ ತಿಳಿದ ನೂರಾರು ಶಿಷ್ಯರು "ನನ್ನ ಹೃದಯ ತೆಗೆದುಕೊಳ್ಳಿ" ಎಂದು ಕೂಗುತ್ತಿದ್ದರು. ಆಗ ವೈದ್ಯರು ಅವರಿಗೆಲ್ಲಾ ಹೇಳಿದರು. "ನೋಡಿ, ನಾಳೆ ಮಧ್ಯಾಹ್ನ ಈ ಧರ್ಮಗುರುವಿನ ಹೃದಯ ಚಿಕಿತ್ಸೆಯಾಗಲಿದೆ. ನಿಜವಾಗಿಯೂ ಹೃದಯ ದಾನ ಮಾಡಬೇಕೆಂದಿರುವವರು ಆಸ್ಪತ್ರೆಯ ಮುಂದಿರುವ ಬಯಲಿಗೆ ಬನ್ನಿ. ನಾನು ಯಾರಾದರೂ ಒಬ್ಬರನ್ನು ಆರಿಸಿ ಹೃದಯ ತೆಗೆದುಕೊಳ್ಳುತ್ತೇನೆ ಎಂದರು. ಅವರಿಗೆ ನಂಬಿಕೆ ಯಾರೂ ಬರುವುದಿಲ್ಲ ಎಂದು. ಮರುದಿನ ಮಧ್ಯಾಹ್ನ ವೈದ್ಯರಿಗೆ ಗಾಬರಿಯಾಗುವಂತೆ ಸಹಸ್ರಾರು ಜನ ಬಯಲಿನಲ್ಲಿ ನೆರೆದಿದ್ದಾರೆ. ಮಾಳಿಗೆಯ ಮೇಲೆ ಹೋದ ವೈದ್ಯರಿಗೆ ಯಾರನ್ನು ಆರಿಸುವುದು ಎಂಬ ಚಿಂತೆ. ಒಂದು ಉಪಾಯ ಹೊಳೆಯಿತು. ಅವರು ಮೇಲಿನಿಂದ ಧ್ವನಿವರ್ಧಕದಲ್ಲಿ ಕೂಗಿದರು. "ನೋಡಿ ನನಗೆ ಬೇಕಾದದ್ದು ಒಂದೇ ಹೃದಯ. ಆದ್ದರಿಂದ ನನ್ನ ಕೈಯಲ್ಲಿರುವ ಕೆಂಪು ಬಲೂನನ್ನು ಕೆಳಗೆ ಬೀಳಿಸುತ್ತೇನೆ. ಅದು ಯಾರ ತಲೆಯ ಮೇಲೆ ಬೀಳುತ್ತದೆಯೋ ಅವರು ಬಂದು ಹೃದಯವನ್ನು ಕೊಡಬೇಕು. ಆಗಬಹುದೇ?" ಎಲ್ಲರೂ ಆಗಬಹುದು ಎಂದರು. ವೈದ್ಯರು ನಿಧಾನಕ್ಕೆ ಬಲೂನನ್ನು ಕೆಳಗೆ ಬಿಟ್ಟರು.

ಕೆಳಗೆ ಏನಾಗುತ್ತಿತ್ತು ಗೊತ್ತೇ? ನೆರೆದಿದ್ದ ಸಹಸ್ರಾರು ಜನ ಕೈ ಎತ್ತಿ ಜೋರಾಗಿ "ನನ್ನ ಹೃದಯ ತೆಗೆದುಕೊಳ್ಳಿ" ಎನ್ನುತ್ತಿದ್ದರು. ಅದಲ್ಲದೆ, ಬಲೂನು ಹತ್ತಿರ ಬಂದಾಗ "ಉಫ್" ಎಂದು ಊದುತ್ತಿದ್ದರು. ಕೊನೆಗೆ ಆ ಬಲೂನು ಯಾರ ತಲೆಯ ಮೇಲೂ ಬೀಳಲಿಲ್ಲ. ಧರ್ಮಗುರುವಿನ ಗತಿ ಏನಾಯಿತೋ?

ನಮ್ಮ ಪ್ರಾಮಾಣಿಕತೆ ಹೀಗಿದೆ. ನಾವು ಬಾಯಿಂದ ಹೇಳುವುದು ಒಂದು ಮಾಡುವುದು ಮತ್ತೊಂದು.

## ಸುಭಾಷಿತ ಮಂಜರೀ

ನನು ದೀಪಃ ಸ್ವಮಾತ್ಮಾನಾಂ, ಸ್ವಾತ್ಮನೈವಾವಭಾಸಯನ್ ।
ದೃಷ್ಟೋ ದೀಪಪ್ರಕಾಶಾರ್ಥಂ ನ ಹಿ ದೀಪಾಂತರಾಹೃತಿ ॥

ಬೃಹದಾರಣ್ಯಕವಾರ್ತಿಕ

ದೀಪವು ಬೆಳಗುವ ಗುಣಪ್ರಕಾಶ ಯಾವುದು ?

ದೀಪವು ತನ್ನನ್ನು ತಾನೆ ಪ್ರಕಾಶಿಸಿಗೊಳ್ಳುತ್ತದೆ. ದೀಪವನ್ನು ನೋಡಲು ಬೇರೆ ದೀಪ ಬೇಡ. ನಮ್ಮ ಹೃದಯಲ್ಲಿ ಬೆಳಗುವ ಪರಂಜ್ಯೋತಿ ಭಗವಂತ, ಪರಂಜ್ಯೋತಿಯ ರೂಪಾಂತರವೇ ದರ್ಶನ. ಸ್ಪರ್ಶನ, ಶ್ರವಣ ಮುಂತಾದವು. ಈ ಅರಿವನ್ನು ಬಳಸಿಕೊಂಡು ಒಳಗೆ ಬೆಳಗುತ್ತಿರುವ ಭಗವಂತನನ್ನು ಅರಿಯಬೇಕಾಗಿದೆ. ಜಗವ ಬೆಳಗುವ ಪರಂಜ್ಯೋತಿಯ ಅರಿವಿಗೆ ಹೊರಗಿನ ಬೇರೆ ಜ್ಞಾನ ಅವಶ್ಯವಿಲ್ಲ.


## ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ದಿವ್ಯಾಕುಮಾರಿ (ಶಿಶುಮಂದಿರ)
ಕಾವ್ಯ (ಪ್ರಾಥಮಿಕ ಶಾಲೆ)
ಮನೋಜ್ (ಪ್ರೌಢಶಾಲೆ)
ದೀಪ್ತಿ (ಪದವಿಪೂರ್ವ)
ಜ್ಯೋತಿ (ಪದವಿ)
ವಿನುತ ಎಸ್.ಎನ್. (ಮಕ್ಕಳ ಪುಟ)
ಜಯಾನಂದ ಪೆರಾಜೆ (ವಿದ್ಯಾಕೇಂದ್ರ)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಚೂರು
**ವಿನ್ಯಾಸ :** ಅನಘ ಡಿಜಿಟಲ್ ಸ್ಕ್ವೇರ್, ಕೈಕಂಬ


## ಮೆದುಳಿನ ಶಸ್ತ್ರ ಚಿಕಿತ್ಸೆ ಹರಪ್ಪಾಕಾಲದಲ್ಲೇ ಇತ್ತು.

ಬುತ್ತಿ

'ಸರ್ಜರಿ' ಎಂದ ಕೂಡಲೇ ನಮಗೆ ನೆನಪಾಗುವುದು ಆಲೋಪತಿ ಚಿಕಿತ್ಸೆ. ಇದರ ಹೊರತು ಬೇರೆ ಚಿಕಿತ್ಸಾಪದ್ಧತಿಯಲ್ಲೂ ಶಸ್ತ್ರಚಿಕಿತ್ಸೆ (ಸರ್ಜರಿ) ಇದ್ದಿತೆಂದು ನಾವು ಊಹಿಸಿಕೊಳ್ಳಲೂ ಕಷ್ಟ. 'ಪ್ಲಾಸ್ಟಿಕ್ ಸರ್ಜರಿ'ಯ ಬಗ್ಗೆ ಅಲ್ಲಿ ಕೇಳಿ ಬರುತ್ತದಾದ್ದರಿಂದ ಅದರ ಜನಕ ಸುಶ್ರುತನೆಂದು ಅರೆ ಮನಸ್ಸಿನಿಂದಲಾದರೂ ಒಪ್ಪಿಯೇವೇನೋ. ಆದರೆ ಮೆದುಳಿನ ಶಸ್ತ್ರಚಿಕಿತ್ಸೆ ಅದೂ ಭಾರತದಲ್ಲಿತ್ತೆಂದು ಒಪ್ಪುವುದು ನಮಗೆ ಕಷ್ಟವಾದೀತು.

ನಾವು ಒಪ್ಪಿಯೇವೋ ಬಿಟ್ಟೆವೋ, ಆದರೆ ಸುಮಾರು 4300 ವರ್ಷಗಳಿಗೂ ಹಿಂದೆಯೇ ನಮ್ಮ ಪೂರ್ವಜರು ಮಿದುಳಿನ ಶಸ್ತ್ರಚಿಕಿತ್ಸೆಯನ್ನು ಮಾಡುತ್ತಿದ್ದರೆಂಬುದನ್ನು ಹರಪ್ಪಾ ಪ್ರದೇಶದಲ್ಲಿ ಸಿಕ್ಕ ರಂಧ್ರಗಳಿರುವ ತಲೆಬುರುಡೆಗಳು ಸಾರಿ ಹೇಳುತ್ತಿವೆ. ತಲೆಬುರುಡೆಗೆ ರಂಧ್ರ ಕೊರೆದು ಮೆದುಳಿನ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಟ್ರೆಪನಿಂಗ್ ಎನ್ನುತ್ತಾರೆ. 'ಆಥ್ರೋಪೋಲೊಜಿಕಲ್ ಸರ್ವೆ ಆಫ್ ಇಂಡಿಯಾ' ಎಂಬ ಸಂಸ್ಥೆಯ ವಿಜ್ಞಾನಿಗಳಾದ ಎ. ಆರ್.ಸಾಂಖ್ಯನ್ ಹಾಗೂ ಜಿ. ಆರ್. ಷಗ್ ಎಂಬವರು ಹರಪ್ಪದಲ್ಲಿ ದೊರೆತ ರಂಧ್ರಗಳುಳ್ಳ ತಲೆಬುರುಡೆಗಳನ್ನು ಕುರಿತು ಸಂಶೋಧನೆ ಮಾಡಿ 'ಕರೆಂಟ್ ಸೈನ್ಸ್' ಎಂಬ ವಿಜ್ಞಾನ ಪತ್ರಿಕೆಯಲ್ಲಿ ಲೇಖನವೊಂದನ್ನು ಪ್ರಕಟಿಸಿದ್ದಾರೆ. ಹರಪ್ಪದಲ್ಲಿ ದೊರೆತ ರಂಧ್ರಯುಕ್ತ ತಲೆಬುರುಡೆಗಳು ಭಾರತದಲ್ಲಿ ಹಿಂದೆ ಮೆದುಳಿನ ಶಸ್ತ್ರ ಚಿಕಿತ್ಸೆ ನಡೆಸಲಾಗುತ್ತದೆಂಬುದನ್ನು ಖಚಿತಪಡಿಸುತ್ತವೆ. ಶಸ್ತ್ರಚಿಕಿತ್ಸೆಯ ನಂತರವೂ ಕೆಲವು ವರ್ಷಗಳ ಕಾಲ ಆ ಶಸ್ತಗಚಿಕಿತ್ಸೆಗೆ ಒಳಗಾದವರು ಬದುಕಿದ್ದರು ಎಂಬ ಅಂಶ ಆ ತಲೆಬುರುಡೆಗಳ ಪರೀಕ್ಷಣೆಯಿಂದ ತಿಳಿದು ಬರುತ್ತದೆ' ಎನ್ನುತ್ತಾರೆ ಆ ವಿಜ್ಞಾನಿಗಳು. ಇದನ್ನೆಲ್ಲ ಓದುತ್ತಿದ್ದಂತೆ ಅನಿಸುವುದು – ನಮಗೇ ತಿಳಿಯದ ಎಷ್ಟೋ ಸತ್ಯಸಂಗತಿಗಳು ಈವರೆಗೂ ತೆರೆದೇ ಇಲ್ಲದ ಇತಿಹಾಸದ ಪುಟಗಳಲ್ಲಿ ಹುದುಗಿವೆಯೆಂಬುದರಲ್ಲಿ ಎರಡು ಮಾತಿಲ್ಲ ಎಂದು.

■

## ಶಿಶುಮಂದಿರ

### ಭಾರತಮಾತಾ ಪೂಜನ್ ಕಾರ್ಯಕ್ರಮ

ಶ್ರೀರಾಮ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶಿಶುಮಂದಿರಗಳ ವತಿಯಿಂದ ಬೇರೆ ಬೇರೆ ಗ್ರಾಮದ ಮನೆಗಳಲ್ಲಿ ಭಾರತಮಾತಾ ಪೂಜನಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

### ಶ್ರೀಸರಸ್ವತಿ ಶಿಶುಮಂದಿರ ಶೇಡಿಗುರಿ

ಇದರ ಆಶ್ರಯದಲ್ಲಿ ಶಂಬೂರು ಗ್ರಾಮದ ಕಮಲಾಕ್ಷ ಹಾಗೂ ಕಲ್ಲಡ್ಕ ರಾಮನಗರದ ಶ್ರೀ ಕೃಷ್ಣಗೌಡ ಇವರ ಮನೆಯಲ್ಲಿ ಕಾರ್ಯಕ್ರಮವನ್ನು ನಡೆಸಲಾಯಿತು. ಈ ಮನೆಗಳಲ್ಲಿ ಮನೆಮಂದಿಯಲ್ಲದೆ ಅಕ್ಕಪಕ್ಕದ ಮನೆಗಳ ಬಂಧುಗಳು ಭಾಗವಹಿಸಿ, ಭಾರತಮಾತೆಗೆ ಪುಷ್ಪಾರ್ಚನೆಗೈದರು.

ದೇಶದಲ್ಲಿನ ಆಗುಹೋಗುಗಳ ಬಗ್ಗೆ ಪ್ರಮುಖರಿಂದ ಮಾಹಿತಿ ನೀಡಲಾಯಿತು ಹಾಗೂ ಭಾರತಮಾತೆಯನ್ನು ಶ್ರದ್ಧಾಭಕ್ತಿಗಳಿಂದ ಗೌರವಪೂರ್ಣವಾಗಿ ಕಾಣುವ ದೃಷ್ಟಿಕೋನ ನೀಡಲಾಯಿತು. ಒಟ್ಟು 69 ಮಂದಿ ಭಾಗವಹಿಸಿದ್ದರು.

### ಶ್ರೀಗಣೇಶ ಶಿಶುಮಂದಿರ ಬೊಂಡಾಲ

ಈ ಶಿಶುಮಂದಿರದ ಆಶ್ರಯದಲ್ಲಿ ಶ್ರೀ ರತ್ನಾಕರ ಕಿಶೋರಿ ಇವರ ಮನೆಯಲ್ಲಿ ಕಾರ್ಯಕ್ರಮ ನಡೆದು, ಶ್ರೀರಾಮ ಶಿಶುಮಂದಿರ ಅಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ ಭಾರತಮಾತಾ ಪೂಜೆಯ ಮಹತ್ವ ತಿಳಿಸಿಕೊಟ್ಟರು. 10 ಮಂದಿ ಮಾತೆಯರು ಭಾಗವಹಿಸಿದ್ದರು.

### ಶ್ರೀಕೃಷ್ಣ ಶಿಶುಮಂದಿರ ಕಂದೂರು –ಸಜಿಪ

ಶ್ರೀ ಸೀತಾರಾಮ್ ನಾಯಕ್ ಇವರ ಮನೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀರಾಮ ಶಿಶುಮಂದಿರ ಅಭಿವೃದ್ಧಿ ಸಮಿತಿಯ ಸದಸ್ಯರಾದ ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ ಮಾತನಾಡಿದರು. ಭಾರತದ ಸ್ಥಿತಿಗತಿ, ಪರಂಪರೆ, ಆಚಾರ–ವಿಚಾರ ಹಿಂದಿನ ಕುಟುಂಬ ಪದ್ಧತಿ ಹಾಗೂ ವರ್ತಮಾನ ಸ್ಥಿತಿಗತಿಗಳ ಬಗ್ಗೆ ಸಂಸ್ಕೃತಿ ಉಳಿಸಲು ನಮ್ಮ ಪಾತ್ರ ಏನೆಂಬ ವಿಚಾರವನ್ನು ತಿಳಿಸಿದರು. 36 ಮಂದಿ ತಾಯಂದಿರು ಮಕ್ಕಳು ಭಾಗವಹಿಸಿದ್ದರು.

### ಅಕ್ಕಮಹಾದೇವಿ ಶಿಶುಮಂದಿರ ಅಜ್ಜಿಬೆಟ್ಟು ಬಿ.ಸಿ.ರೋಡ್

ಶ್ರೀ ಭುವನೇಶ್ ಶೆಟ್ಟಿ ಬಿ.ಸಿ.ರೋಡ್ ಶ್ರೀಮತಿ ಲತಾ ಅಜ್ಜಿಬೆಟ್ಟು ಹಾಗೂ ಶ್ರೀಯುತ ಗಣೇಶ್ ಮೊಡಂಕಾಪು ಇವರ ಮನೆಯಲ್ಲಿ ಭಾರತ ಮಾತಾ ಪೂಜನ್ ನಡೆಯಿತು.



ಶ್ರೀರಾಮ ಶಿಶುಮಂದಿರದ ಅಭಿವೃದ್ಧಿ ಸಮಿತಿ ಸದಸ್ಯರು ಶ್ರೀಮತಿ ಆಶಾಪ್ರಸಾದ್ ಮತ್ತು ಶ್ರೀಮತಿ ಸುಧಾ ಭಟ್ ಶ್ರೀರಾಮ ಶಿಶುಮಂದಿರದ ಅಭಿವೃದ್ಧಿ ಸಮಿತಿ ವ್ಯವಸ್ಥಾಪಕರು ಹಾಗೂ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಮಂಗಳೂರು ಕಾರ್ಯಕಾರಿಣಿ ಸದಸ್ಯರಾದ ಶ್ರೀಯುತ ಸುರೇಶ್ ಪರ್ಕಳ ಆಗಮಿಸಿ ಕಾರ್ಯಕ್ರಮದ ಉದ್ದೇಶ ಮಹತ್ವ ತಿಳಿಸಿದರು. ಮೂರು ಕಡೆಗಳಲ್ಲಿ 122 ಜನ ತಾಯಂದಿರು, ಪಾಲಕರು, ಮಕ್ಕಳು ಭಾಗವಹಿಸಿದ್ದರು.

### ಕೊಬ್ಬರಿ ಮಿಠಾಯಿ ಕಾರ್ಯಗಾರ 11–2–2016



ಶ್ರೀಗುರೂಜಿ ಜನ್ಮದಿನಾಚರಣೆಯದಂದು ಸಹಭೋಜನಕ್ಕೆ ಪೋಷಕರು ತಯಾರಿಸಿ ತರಬೇಕಿದ್ದ ಕೊಬ್ಬರಿ ಮಿಠಾಯಿಯನ್ನು ತಯಾರಿಸುವ ಪ್ರಾತ್ಯಕ್ಷಿಕೆಯನ್ನು ಶ್ರೀಮತಿ ಶುಭಲಕ್ಷ್ಮೀ ಶಿವಗಿರಿ ಇವರು ನೀಡಿದರು. ಈ ಕಾರ್ಯಾಗಾರದಲ್ಲಿ ಪೂರ್ವ ಗುರುಕುಲ ಹಾಗೂ ಶಿಶುಮಂದಿರದ ಮಕ್ಕಳ 70 ಮಂದಿ ತಾಯಂದಿರು ಭಾಗವಹಿಸಿ, ಇದರ ಸದುಪಯೋಗವನ್ನು ಪಡೆದುಕೊಂಡರು.

### ಪೂರ್ವಗುರುಕುಲ ಚಿಂತನ ಬೈಠಕ್ ದಿನಾಂಕ 22–2–2016

ಪೂರ್ವಗುರುಕುಲ ಚಿಂತನ ಬೈಠಕ್ ದಿನಾಂಕ ಫೆಬ್ರವರಿ 22ರಂದು ಶ್ರೀರಾಮ ವಿದ್ಯಾಕೇಂದ್ರದಲ್ಲಿ ಮತ್ತು 23ರಂದು ಬೋಳಂತೂರು ಶ್ರೀ ಗೋಪಾಲ ಸುಷ್ಮಾ ಇವರ ಮನೆಯಲ್ಲಿ ನಡೆಯಿತು.



ಡಾ. ಉಪೇಂದ್ರ ಶೆಣೈಯವರ ಚಿಂತನೆಗೆ ಮೂರ್ತರೂಪ ನೀಡಲು ಈ ಚಿಂತನ ಬೈಠಕ್ ಸೇರಿದ್ದು, ಶಿಶುಮಂದಿರದಲ್ಲಿ ಸಿಗುವ ಶಿಕ್ಷಣವನ್ನು 1ನೇ ತರಗತಿಯಿಂದ 4ನೇ ತರಗತಿಯವರೆಗೆ ವಿಸ್ತರಿಸುವ ಬಗ್ಗೆ ಚರ್ಚಿಸಲಾಯಿತು.

ಬೈಠಕ್‌ನಲ್ಲಿ ಪ್ರಮುಖರಾದ ಡಾ. ಪ್ರಭಾಕರ ಭಟ್ ಕಲ್ಲಡ್ಕ, ಶ್ರೀಯುತ ಹೊ.ರಾ.ರಾಜಾರಾಮ್ ಹೊಳೆಹೊನ್ನೂರು, ಶ್ರೀ ವಸಂತ ಮಾಧವ ಕಲ್ಲಡ್ಕ, ಭ. ಸಾವಿತ್ರಿ ಮಾತೃಶ್ರೀ ಮೈತ್ರೇಯಿ ಗುರುಕುಲ, ಶ್ರೀ ರವಿರಾಜ್ ಕಣಂತೂರು, ಶ್ರೀ ರಘುರಾಜ್ ಉಬರಡ್ಕ, ಶ್ರೀ ವೆಂಕಟರಮಣ ಕಡಬ, ಶ್ರೀ ಕೃಷ್ಣರಾಜ್ ಶಾನ್‌ಭಾಗ್ ಕೋಟೇಶ್ವರ, ಭ. ಗಂಗಾ ಕಲ್ಲಡ್ಕ ಉಪಸ್ಥಿತರಿದ್ದರು.

### ಇಳಂತಿಲ ಶಿಶುಮಂದಿರದ ಆಡಳಿತ ಮಂಡಳಿ ಮತ್ತು ಪೋಷಕರ ಭೇಟಿ :



ದಿನಾಂಕ : 2–2–2015ರಂದು ಶ್ರೀರಾಮ ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನಡೆದ ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ ಭಾಗವಹಿಸಿ, ಶಿಶುಮಂದಿರದ ಚಟುವಟಿಕೆಗಳನ್ನು ವೀಕ್ಷಿಸಿದರು.

### ಪಾಲಕರ ಪ್ರವಾಸ

**ದಿನಾಂಕ 6–2–2016 ಮತ್ತು 7–2–2016**



ಶಿಶುಮಂದಿರದ ಮಕ್ಕಳು, ಪಾಲಕರು ಮತ್ತು ಅಭಿವೃದ್ಧಿ ಸಮಿತಿಯ ಸದಸ್ಯರಿಗೆ ಪ್ರತೀ ವರ್ಷದಂತೆ ಈ ವರ್ಷವೂ ಪ್ರವಾಸ ಏರ್ಪಡಿಸಲಾಗಿತ್ತು. ಒಟ್ಟು 51 ಮಂದಿ ಭಾಗವಹಿಸಿದ ಈ ಪ್ರವಾಸದಲ್ಲಿ ಉತ್ತರ ಕನ್ನಡ ಜಿಲ್ಲೆಯ ಯಾಣ, ಮತ್ತು ಮಿರ್ಜಾನ ಕೋಟೆ ಅಲ್ಲಿಂದ ಗೋಕರ್ಣ ಕ್ಷೇತ್ರ ದರ್ಶನ ಮಾಡಿ ಭೋಜನ ಪ್ರಸಾದ ಸ್ವೀಕರಿಸಿ, ಮುರುಡೇಶ್ವರ ಮಾರ್ಗವಾಗಿ ಕಲ್ಲಡ್ಕ ತಲುಪಿದೆವು.

## ಅತಿಥಿಗಳ ಭೇಟಿ



ಶ್ರೀ ಅನಂತ ಪದ್ಮನಾಭ ಮಾಂಟೇಸ್ಸೋರಿ ತರಬೇತಿ ಕೇಂದ್ರದ ಮಾರ್ಗದರ್ಶಕರು ಹಾಗೂ ಶ್ರೀಮತಿ ಸುಧಾ ಗೋಪಿನಾಥ ಮಾಂಟೇಸ್ಸೋರಿ ಶಿಕ್ಷಕಿ ಇವರು ಶ್ರೀರಾಮ ಶಿಶುಮಂದಿರದಲ್ಲಿ ನಡೆಯುವಂತಹ ಶಿಕ್ಷಣ ಪದ್ಧತಿ ವೀಕ್ಷಿಸಿದರು. ನಂತರ ವಿದ್ಯಾಕೇಂದ್ರದ ಆಶ್ರಯದಲ್ಲಿ ನಡೆಯುವ ಶಿಶುಮಂದಿರಗಳಾದ ಬಿ.ಸಿ.ರೋಡ್ ಅಕ್ಕಮಹಾದೇವಿ ಶಿಶುಮಂದಿರ ಶೇಡಿಗುರಿ ಸರಸ್ವತಿ ಶಿಶುಮಂದಿರ ಕಂದೂರು ಸಜಿಪ ಶ್ರೀಕೃಷ್ಣ ಶಿಶುಮಂದಿರ ಬೊಂಡಾಲ ಶ್ರೀಗಣೇಶ ಶಿಶುಮಂದಿರಗಳಿಗೆ ಭೇಟಿ ನೀಡಿದರು. ಶಿಶುಮಂದಿರದಲ್ಲಿ ನಡೆಯುವ ಶಿಕ್ಷಣದ ಬಗ್ಗೆ ಆಶ್ಚರ್ಯ ಹಾಗೂ ಸಂತೋಷ ವ್ಯಕ್ತಪಡಿಸಿದರು. ಶಿಕ್ಷಕಿಯರಲ್ಲಿ ಇರುವ ಶ್ರದ್ಧೆ. ಮಕ್ಕಳ ಬಗ್ಗೆ ಇರುವ ಕಾಳಜಿ ನೋಡಿ ಮೆಚ್ಚುಗೆ ವ್ಯಕ್ತಪಡಿಸಿದರು. ಶ್ರೀರಾಮ ವಿದ್ಯಾಕೇಂದ್ರದಲ್ಲಿ ಶೈಕ್ಷಣಿಕ ವಾತಾವರಣ, ಶೈಕ್ಷಣಿಕ ಪಠ್ಯವಸ್ತುವಲ್ಲದೆ ಜೀವಂತಿಕೆಯ ಲಕ್ಷಣವಾದ ಆಧ್ಯಾತ್ಮದ ಸ್ಪರ್ಶವನ್ನು ಅನುಭವಿಸಿದ ಅವರು ಈ ಸಾಧನೆಗಾಗಿ ಅಭಿನಂದಿಸಿದರು ಮತ್ತು ತಂತ್ರಜ್ಞಾನ ಹಾಗೂ ಪರಂಪರೆಯ ಆಧ್ಯಾತ್ಮಿಕತೆಯನ್ನು ಜೋಡಿಸುವ ಕೆಲಸವನ್ನು ನಾವು ಜತೆಜತೆಯಾಗಿ ನಡೆಸೋಣ ಎಂದರು.

## ಅಡಿಕೆ ಸಸಿಗಳನ್ನು ನೆಡುವ ಕಾರ್ಯಕ್ರಮ

16.2.2016

ವಿದ್ಯಾಕೇಂದ್ರದ ಆಶ್ರಯದಲ್ಲಿರುವ ಸುಧೆಕಾರ್‌ನ ಕೃಷಿಭೂಮಿಯಲ್ಲಿ ಮಾತೆಯರು



ಅಡಿಕೆ ಸಸಿಗಳನ್ನು ನೆಡುವ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಒಟ್ಟು 15 ಮಾತೆಯರು ಹಾಗೂ ಸಂಸ್ಥೆಯ ಹಿರಿಯರು ಉಪಸ್ಥಿತರಿದ್ದರು.

# ಪ್ರಾಥಮಿಕ ಶಾಲೆ

## ಭಗವದ್ಗೀತೆ ಮತ್ತು ಶ್ರೀಕೃಷ್ಣ ಪರೀಕ್ಷೆ ಫಲಿತಾಂಶ

ದಿನಾಂಕ 30.01.2016 ರಂದು ಅಂತಾರಾಷ್ಟ್ರೀಯ ಕೃಷ್ಣಾ ಭವನಾಮೃತ ಸಂಘ ವತಿಯಿಂದ ನಡೆದ ಜಿಲ್ಲಾ ಮಟ್ಟದ ಭಗವದ್ಗೀತಾ ಪ್ರತಿಭಾಶೋಧ ಪರೀಕ್ಷೆಯಲ್ಲಿ ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕದ 7ನೇ ತರಗತಿ ವಿದ್ಯಾರ್ಥಿಗಳಾದ ಅರ್ಚನಾ ಪ್ರಥಮ, ಪ್ರತಿಭಾ



ದ್ವಿತೀಯ, ಪ್ರತೀಕಾ.ಎಸ್ ತೃತೀಯ ಹಾಗೂ ಶ್ರೀಕೃಷ್ಣ ಪರೀಕ್ಷೆಯಲ್ಲಿ ಅಮೃತಾ 6ನೇ ತರಗತಿ ಪ್ರಥಮ ಸ್ಥಾನ ಪಡೆದು ಶಾಲೆಗೆ ಕೀರ್ತಿ ತಂದಿರುತ್ತಾರೆ.

## ಭಜನೆ ಮತ್ತು ಹುಟ್ಟುಹಬ್ಬ :



ದಿನಾಂಕ 27.02.2016ರಂದು ಭಜನೆ ಹಾಗೂ ಸಾಮೂಹಿಕ ಹುಟ್ಟುಹಬ್ಬ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದ ಅತಿಥಿಗಳಾದ ಬಂಟ್ವಾಳ ತಾಲೂಕು ಪಂಚಾಯತ್ ಸದಸ್ಯರಾದ ಲಕ್ಷ್ಮೀ ಗೋಪಾಲಚಾರ್ಯ ಹಾಗೂ ಪಿ.ಕೆ ಪದ್ಮನಾಭ ಇವರು ಹುಟ್ಟುಹಬ್ಬ ಆಚರಿಸಿದ ಮಕ್ಕಳಿಗೆ ಶುಭ ಹಾರೈಸಿದರು. ಕುವೈಟ್‌ನಲ್ಲಿ ಉದ್ಯೋಗಿಯಾಗಿರುವ ಶರತ್ ಕುಮಾರ್ ಮತ್ತು ಶಾಲಾ ಮುಖ್ಯೋಪಾಧ್ಯಾಯರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಅತಿಥಿಗಳ ಭೇಟಿ

ದಿನಾಂಕ 12.02.2016 ರಂದು ಯೋಗಸಾಧಕರಾದ ಡಾ.ರಾಘವೇಂದ್ರ ಪೈ ದಂಪತಿಗಳು ಆಗಮಿಸಿ ತರಗತಿ ಚಟುವಟಿಕೆಗಳನ್ನು ಮೆಚ್ಚುಗೆ ವ್ಯಕ್ತಪಡಿಸಿದರು.

## ಹೊರಸಂಚಾರ



ದಿನಾಂಕ 07.02.2016 ಭಾನುವಾರದಂದು 5, 6 ಮತ್ತು 7ನೇ ತರಗತಿ ವಿದ್ಯಾರ್ಥಿಗಳ ಹೊರಸಂಚಾರವನ್ನು ಕೊಡ್ಯಡ್ಕ ಅನ್ನಪೂರ್ಣೇಶ್ವರಿ ದೇವಸ್ಥಾನ, ಉಡುಪಿ ಕೃಷ್ಣ ಮಠ, ಮಣಿಪಾಲ ತಾರಾಲಯ, ಜೀವ ವಿಜ್ಞಾನ ವಸ್ತು ಸಂಗ್ರಹಾಲಯ ಮಣಿಪಾಲ ಹಾಗೂ ಮಲ್ಪೆ ಬೀಚ್‌ಗೆ ಹಮ್ಮಿಕೊಳ್ಳಲಾಗಿತ್ತು. ಒಟ್ಟು 70ವಿದ್ಯಾರ್ಥಿಗಳು, ಹಾಗೂ 9 ಶಿಕ್ಷಕರು ಭಾಗವಹಿಸಿದ್ದರು.

## ವಿಜ್ಞಾನ ದಿನಾಚರಣೆ



ದಿನಾಂಕ 01.03.2016ರಂದು ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ ಕಲ್ಲಡ್ಕ ಇಲ್ಲಿ ವಿಜ್ಞಾನ ದಿನಾಚರಣೆ ಆಚರಿಸಲಾಯಿತು. ಕಾರ್ಯಕ್ರಮದಲ್ಲಿ ವಿದ್ಯಾಕೇಂದ್ರದ ಕಾರ್ಯನಿರ್ವಾಹಣಾಧಿಕಾರಿ ವಸಂತ ಮಾಧವ ಇವರು ವಿಜ್ಞಾನ ದಿನಾಚರಣೆಯ ಮಹತ್ವ ಮತ್ತು ಸಿ.ವಿ.ರಾಮನ್‌ರವರ ಆವಿಷ್ಕಾರಗಳ ಕುರಿತು ತಿಳಿಸಿದರು. ವಿಜ್ಞಾನ ದಿನಾಚರಣೆಯ ಪ್ರಯುಕ್ತ ವಿದ್ಯಾರ್ಥಿಗಳೇ ತಯಾರಿಸಿದ ವಿಜ್ಞಾನ ಮಾದರಿ ಮತ್ತು ಪ್ರಯೋಗಗಳನ್ನು ವಿದ್ಯಾಕೇಂದ್ರದ ಹಿರಿಯರು ವೀಕ್ಷಿಸಿದರು.

# ಪ್ರೌಢಶಾಲೆ

## ಮದರಂಗಿ ಹಾಕುವ ಕಲೆ ಬಗ್ಗೆ ಪ್ರಾತ್ಯಕ್ಷಿಕೆ

09.02.2016

ದಿನಾಂಕ 9.2.16 ರಂದು ಮಧುಕರ ಸಭಾಂಗಣದಲ್ಲಿ ನಡೆದ ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ ಶ್ರೀ ರಣಬೀರ್ ಸಿಂಗ್ ಠಾಕೂರ್, ರಾಜಸ್ಥಾನ, ಭರತಪುರ ಇವರು ಮದರಂಗಿ ಹಾಕುವ ಕಲೆ ಬಗ್ಗೆ ಪ್ರಾತ್ಯಕ್ಷಿಕೆ ಮಾಹಿತಿ ನೀಡಿದರು.

## ಅಂತರ್ಜಾಲ ಬಳಕೆ ಜಾಗೃತಿ ಶಿಬಿರ15-02-2016



ಗೂಗಲ್ ವೆಬ್ ರೇಂಜರ್ಸ್ ಇಂಡಿಯ, ಸಾರ್ವಜನಿಕ ಶಿಕ್ಷಣ ಇಲಾಖೆ ಬಂಟ್ವಾಳ, ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕ ಇವರ ಆಶ್ರಯದಲ್ಲಿ ಬಂಟ್ವಾಳ ತಾಲೂಕಿನ ಆಯ್ದ ವಿದ್ಯಾರ್ಥಿಗಳಿಗೆ ಮತ್ತು ಅಧ್ಯಾಪಕರಿಗೆ ಅಂತರ್ಜಾಲ ಬಳಕೆ ಹಾಗೂ ಸುರಕ್ಷೆತೆಯ ಬಗ್ಗೆ ಫೆ.15ರಂದು ಕಾರ್ಯಾಗಾರವನ್ನು ಶ್ರೀರಾಮ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿತ್ತು. ಲರ್ನಿಂಗ್ ಲಿಂಕ್ ಫೌಂಡೇಶನ್‌ನ ಸಾರ್ವಜನಿಕ ಸಂಪರ್ಕ ಅಧಿಕಾರಿ ವಿಕ್ರಮ ಕುಂಟಾರು ಕಡೇಶ್ವಾಲ್ಯ ಮಾಹಿತಿ ಹಾಗೂ ತರಬೇತಿ ನೀಡಿದರು. ಕ್ಷೇತ್ರ ಶಿಕ್ಷಣ ಅಧಿಕಾರಿ ಶೇಷಶಯನ ಕಾರಿಂಜ, ಮುಖ್ಯ ಶಿಕ್ಷಕ ರಮೇಶ ಎನ್, ಉಪನ್ಯಾಸಕ ರಾಜಾರಾಮ ವರ್ಮ ಉಪಸ್ಥಿತರಿದ್ದು ಪ್ರಮಾಣ ಪತ್ರ ವಿತರಿಸಿದರು. ಕಂಪ್ಯೂಟರ್ ಶಿಕ್ಷಕ ಕುಶಾಲಪ್ಪ ಅಮ್ಟೂರು ಕಾರ್ಯಕ್ರಮ ಸಂಯೋಜಿಸಿದರು.

## ಶ್ರದ್ಧಾಂಜಲಿ ಕಾರ್ಯಕ್ರಮ

ಕೋಟ್ಯಂತರ ಭಾರತೀಯರ ಬದುಕಿಗಾಗಿ ಜೀವನ ಸವೆಸಿದ ಸೈನಿಕರ ಬದುಕು ನಮ್ಮೆಲ್ಲರಿಗೂ ಸ್ಫೂರ್ತಿ. ಹವಾಮಾನದ ವೈಪರೀತ್ಯವಿರುವ ಸಿಯಾಚಿನ್ ಪ್ರದೇಶದಲ್ಲಿ ವೀರ ಮರಣವನ್ನಪ್ಪಿದ ವೀರ ಯೋಧ ಲ್ಯಾನ್ಸ್‌ನಾಯ್ಕ್ ಹನುಮಂತಪ್ಪ ಕೊಪ್ಪದ್ ಆತ್ಮಕ್ಕೆ ದೇವರು ಚಿರಶಾಂತಿ ಕರುಣಿಸಲಿ ಎಂದು ಶ್ರೀ ಮನೋಜ್ ತಿಳಿಸಿದರು.

## ವಿಶೇಷ ಮಕ್ಕಳ ಕ್ರೀಡಾಕೂಟದಲ್ಲಿ ತೃತೀಯಸ್ಥಾನ

ಚಿಕ್ಕಬಳ್ಳಾಪುರದಲ್ಲಿ ದಿನಾಂಕ 08.02.2016ರಂದು ಜರುಗಿದ ಕರ್ನಾಟಕ ರಾಜ್ಯಮಟ್ಟದ ವಿಶೇಷ ಮಕ್ಕಳ ಕ್ರೀಡಾಕೂಟದಲ್ಲಿ ಶ್ರೀರಾಮ ಪ್ರೌಢಶಾಲೆ ಕಲ್ಲಡ್ಕದ 9 ತರಗತಿಯ ಕು।ಮೀನಾಕ್ಷಿ 100ಮೀ ಓಟ ಸ್ಪರ್ಧೆಯಲ್ಲಿ ತೃತೀಯ ಸ್ಥಾನ ಪಡೆದಿರುತ್ತಾಳೆ.



ಇವರಿಗೆ ವಿದ್ಯಾಕೇಂದ್ರದ ಸಂಚಾಲಕರು ಡಾ. ಪ್ರಭಾಕರ ಭಟ್, ಅಧ್ಯಕ್ಷರು ನಾರಾಯಣ ಸೋಮಯಾಜಿ, ಮುಖ್ಯೋಪಾಧ್ಯಾಯರು ರಮೇಶ್ ಎನ್, ಅಧ್ಯಾಪಕ ವೃಂದ ಅಭಿನಂದನೆ ಸಲ್ಲಿಸಿದರು.

## ಅತಿಥಿಗಳ ಭೇಟಿ 08.02.2016



ವಿದ್ಯಾರ್ಥಿಗಳು ಜೀವನದಲ್ಲಿ ಒಂದು ಉತ್ತಮ ಗುರಿಯನ್ನು, ಧ್ಯೇಯವನ್ನು ಇಟ್ಟುಕೊಂಡಿರಬೇಕು. ಆ ಗುರಿಯನ್ನು ಈಡೇರಿಸಲು ಶಿಕ್ಷಣದ ಸಂದರ್ಭದಲ್ಲಿ ಉತ್ತಮವಾದ ಪ್ರಯತ್ನವನ್ನು ನಡೆಸಬೇಕು ಎಂದು ಸಹ್ಯಾದ್ರಿ ಕಾಲೇಜಿನ ಪ್ರಾಂಶುಪಾಲರಾದ ಡಾ। ಭೂಷಿಯವರು ಸರಸ್ವತಿ ವಂದನಾ ಕಾರ್ಯಕ್ರಮದಲ್ಲಿ ತಿಳಿಸಿದರು. ಶ್ರೀ ನವೀನ್ ಚಂದ್ರ ಕಾರ್ಪೋರೇಟರ್ ಮಂಗಳೂರು, ಶ್ರೀಲತಾ ಉಳ್ಳಾಲ್, ಸಹ್ಯಾದ್ರಿ ಕಾಲೇಜಿನ ಉಪನ್ಯಾಸಕಿ, ಶ್ರೀ ಅನಂತ ಪದ್ಮನಾಭ ಬೆಂಗಳೂರು, ಮುಖ್ಯಸ್ಥರು ಇಂಡಿಯನ್ ಮಾಂಟೇಸ್ಸೋರಿ ಮಲ್ಲೇಶ್ವರಂ, ಸುಷ್ಮಾಗೋಪಿನಾಥ್ ನಿರ್ದೇಶಕರು ಇಂಡಿಯನ್ ಮಾಂಟೇಸ್ಸೋರಿ ಮಲ್ಲೇಶ್ವರಂ ಅತಿಥಿಗಳಾಗಿ ಭಾಗವಹಿಸಿದರು. ಈ ಸಂದರ್ಭದಲ್ಲಿ ಡಾ।ಪ್ರಭಾಕರ ಭಟ್ ಕಲ್ಲಡ್ಕ, ಕನ್ನಡ ಶಿಕ್ಷಕರಾದ ಶ್ರೀ ಜಯಾನಂದ ಪೆರಾಜೆ ಉಪಸ್ಥಿತರಿದ್ದರು.

## ಶ್ರೀ.ಮ.ನಿ.ಪ್ರ. ದಿಂಗಾಲೇಶ್ವರ ಸ್ವಾಮೀಜಿ ಬಾಳೆಹೊಸರು ಭೇಟಿ

ಪ್ರತಿಯೊಂದು ವಿದ್ಯಾರ್ಥಿಯು ಒಂದು ಸಂಕಲ್ಪವನ್ನು ಇಟ್ಟುಕೊಳ್ಳಬೇಕು. ನನ್ನಿಂದ ಅಸಾಧ್ಯ ಎಂಬ ಮಾತು ಬಿಟ್ಟು ಆತ್ಮವಿಶ್ವಾಸದಿಂದ ಸಾಧನೆ ಮಾಡಿದಾಗ ಸಂಕಲ್ಪದ ಈಡೇರಿಕೆ ಸಾಧ್ಯ. ಆ ರೀತಿಯ ಆತ್ಮವಿಶ್ವಾಸವನ್ನು ವಿದ್ಯಾರ್ಥಿಗಳಲ್ಲಿ



ಬೆಳೆಸುವ ಕಾರ್ಯವನ್ನು ಶ್ರೀರಾಮ ವಿದ್ಯಾಕೇಂದ್ರ ನಡೆಸುತ್ತಿರುವುದು ಶ್ಲಾಘನೀಯ ಎಂದು ಶ್ರೀ.ಮ.ನಿ.ಪ್ರ. ದಿಂಗಾಲೇಶ್ವರ ಸ್ವಾಮೀಜಿ ಬಾಳೆಹೊಸರು ತಿಳಿಸಿದರು. ಈ ಸಂದರ್ಭದಲ್ಲಿ ಶ್ರೀ ಉಮೇಶ್ ಹೆಗ್ಡೆ ಪ್ರಾಚಾರ್ಯರು ಮೈತ್ರೇಯಿ ಗುರುಕುಲ, ಶ್ರೀ ಜಯಾನಂದ ಪೆರಾಜೆ ಉಪಸ್ಥಿತರಿದ್ದರು.

.

## ವಿಶೇಷ ಚೇತನ ಮಕ್ಕಳ ಕ್ರೀಡಾಕೂಟ



ದ.ಕ.ಜಿಲ್ಲಾ ಮಟ್ಟದ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ವಿಶೇಷ ಚೇತನ ಮಕ್ಕಳ ಕ್ರೀಡಾಕೂಟ ಜರಗಿತು. ಕ್ರೀಡಾಕೂಟವನ್ನು ಉದ್ಘಾಟಿಸಿ ಮಾತನಾಡಿದ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲಕ ಡಾ।ಪ್ರಭಾಕರ ಭಟ್‌ರವರು "ಯಾರೂ ಕೂಡ ಪರಿಪೂರ್ಣರಲ್ಲ; ಶಾರೀರಿಕ ವೈಕಲ್ಯವಿರುವ ಮಕ್ಕಳನ್ನು ಅಪಹಾಸ್ಯ ಮಾಡದೆ, ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕಾರ್ಯ ನಡೆಯಬೇಕಾಗಿದೆ. ಇಂತಹ ಕ್ರೀಡಾಕೂಟಗಳು ಅವರ ನೋವು ಮತ್ತು ಕೀಳರಿಮೆಯನ್ನು ದೂರಮಾಡಿ ಮನ ಅರಳಿಸುವ ಹಾಗೂ ಅಂತಃಶಕ್ತಿಯನ್ನು ಜಾಗೃತಗೊಳಿಸುವ ಕಾರ್ಯಮಾಡಲಿ" ಎಂದು ಹಾರೈಸಿದರು. ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಶೇಷಶಯನ ಕಾರಿಂಜ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

## ರಾಷ್ಟ್ರೀಯ ವಿಜ್ಞಾನ ದಿನಾಚಾರಣೆ

ವಿಜ್ಞಾನವೆಂಬುದು ಕೇವಲ ಬಾಯಿಪಾಠದ ವಿಷಯವಲ್ಲ. ವಿಚಾರವನ್ನು ಓದಿ ಅನ್ವೇಷಣೆ ಮಾಡುವ ಮನೋಭಾವವನ್ನು ವಿದ್ಯಾರ್ಥಿಗಳು ರೂಪಿಸಿಕೊಳ್ಳಬೇಕು. ಎಂದು ಶ್ರೀಮತಿ ಹೇಮ ವಿಜ್ಞಾನ ಉಪನ್ಯಾಸಕಿ ಸರಕಾರಿ ಪ.ಪೂ.ಕಾಲೇಜು ಬೆಂಜನಪದವು ತಿಳಿಸಿದರು.



ಅವರು ಶ್ರೀರಾಮ ಪ್ರೌಢಶಾಲೆಯಲ್ಲಿ ನಡೆದ ರಾಷ್ಟ್ರೀಯ ವಿಜ್ಞಾನ ದಿನಾಚಾರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.



ಶ್ರೀಮತಿ ವಿನುತಾ ಮಾತಾಜಿ ವಿಜ್ಞಾನ ದಿನಾಚರಣೆ ಮಹತ್ವದ ಕುರಿತು ತಿಳಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀವಸಂತ ಮಾಧವ ವಹಿಸಿದರು. ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಪ್ರಯುಕ್ತ ವಿಜ್ಞಾನ ವಸ್ತು ಪ್ರದರ್ಶನ ಹಮ್ಮಿಕೊಳ್ಳಲಾಗಿತ್ತು.

## ಮಹಾಭಾರತ ಪರೀಕ್ಷೆ



ಭಾರತ ಸಂಸ್ಕೃತಿಜ್ಞಾನ ಪ್ರತಿಷ್ಠಾನ ಬೆಂಗಳೂರು ಇದರ ವತಿಯಿಂದ ನಡೆದ ರಾಜ್ಯ ಮಟ್ಟದ ಮಹಾಭಾರತ ಪರೀಕ್ಷೆಯಲ್ಲಿ ಕಲ್ಲಡ್ಕ ಶ್ರೀರಾಮ ಪ್ರೌಢಶಾಲೆಯ 9ನೇ ತರಗತಿಯ ವಿದ್ಯಾರ್ಥಿ ರಂಜನ್ ಎಸ್. ಜಿಲ್ಲಾ ಮಟ್ಟದಲ್ಲಿ ದ್ವಿತೀಯ ಸ್ಥಾನ ಪಡೆದಿರುತ್ತಾರೆ. ಈತ ಸಜೀಪಮೂಡ ಗ್ರಾಮದ ಕಾರಾಜೆಯ ಶ್ರೀನಿವಾಸಗೌಡ ಮತ್ತು ಜಯಂತಿ ದಂಪತಿಗಳ ಪುತ್ರ.

## ಅಂತರ್ಜಾಲ ಪ್ರಪಂಚ ಕಾರ್ಯಕ್ರಮ

8ನೇ ತರಗತಿಯ ವಿದ್ಯಾರ್ಥಿಗಳಿಗೆ ಅಂತರ್ಜಾಲ ಶಿಕ್ಷಣದ ಪ್ರಾಮುಖ್ಯತೆ ಹಾಗೂ ಉಪಯೋಗ ತಿಳಿಸುವ ಕಾರ್ಯಕ್ರಮ. ಹತ್ತಿರದ ಸರ್ಕಾರಿ ಶಾಲೆಯ ವಿದ್ಯಾರ್ಥಿಗಳಿಗೆ ಒಟ್ಟು ನಾಲ್ಕು ದಿವಸ ಈ ಕಾರ್ಯಕ್ರಮ ನಡೆಯಿತು.

ಸಂಸ್ಥೆಯ ಮುಖ್ಯಕಾರ್ಯನಿರ್ವಾಹಣಾ ಅಧಿಕಾರಿ ವಸಂತ ಮಾಧವ ಇವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ಕಾರ್ಯಕ್ರಮದಲ್ಲಿ ಶಾಲಾ ಮುಖ್ಯೋಪಾಧ್ಯಾಯರು, ಬಾಳ್ತಿಲ ಶಾಲೆಯ ಶಿಕ್ಷಕಿ ಕ್ಷಮಾ, ಗೋಳ್ತಮಜಲು ಶಾಲೆಯ ಶಿಕ್ಷಕಿ ಮ್ಯಾಗ್ನೆಟ್ ಡಿ'ಸೋಜ, ಕಲ್ಲಡ್ಕ ಮಾದರಿ ಶಾಲೆಯ ಶಿಕ್ಷಕಿ ಸಂಗೀತ ಇವರು ಉಪಸ್ಥಿತರಿದ್ದರು.



ಗಣಕ ಶಿಕ್ಷಕ ಶ್ರೀ ಕುಶಾಲಪ್ಪ ಕಾರ್ಯಕ್ರಮವನ್ನು ಸಂಯೋಜಿಸಿ, ಕಾರ್ಯಕ್ರಮದಲ್ಲಿ ಬಾಳ್ತಿಲ, ಗೋಳ್ತಮಜಲು ಮತ್ತು ಕಲ್ಲಡ್ಕ ಮಾದರಿ ಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳು ಭಾಗವಹಿಸಿದ್ದರು.

## ಅಂಧರ ಸಂಗೀತ ಕಾರ್ಯಕ್ರಮ :



ಅಮೃತ ನೇತ್ರಂ ಸಂಗೀತ ತರಬೇತಿ ಕಲಾಸಂಸ್ಥೆ ಬೆಂಗಳೂರು ಇವರ ವತಿಯಿಂದ ಪ್ರೌಢಶಾಲಾ ವಿಭಾಗದ ಮಧುಕರ ಸಭಾಂಗಣದಲ್ಲಿ ಸಂಗೀತ ಕಾರ್ಯಕ್ರಮ ನೆರವೇರಿತು.

## ಸಾಧಕಾಭಿವಂದನಾ ಕಾರ್ಯಕ್ರಮ

ದೈಹಿಕ ಶಿಕ್ಷಣ ಶಿಕ್ಷಕರ ಸಂಘ ಬಂಟ್ವಾಳ ತಾಲೂಕು ವತಿಯಿಂದ 24.02.2016ರಂದು ಮಧುಕರ ಸಭಾಂಗಣದಲ್ಲಿ ಶ್ರೀ ವಸಂತ ಮಾಧವ ಇವರ ಅಧ್ಯಕ್ಷತೆಯಲ್ಲಿ 'ಸಾಧಕಾಭಿವಂದನಾ ಕಾರ್ಯಕ್ರಮ' ನೆರವೇರಿತು.



ನಿವೃತ್ತ ಶಿಕ್ಷಕರಾದ ಶ್ರೀ ಪೃಥ್ವೀರಾಜ್ ಜೈನ್, ಜಯಾ ಪಿ. ಹಾಗೂ ಶಂಭೂರು ಶಾಲಾ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಜಿನ್ನಪ್ಪರವರನ್ನು ಮತ್ತು 2015–16ನೇ ಸಾಲಿನಲ್ಲಿ ರಾಷ್ಟ್ರೀಯ ಹಾಗೂ ಪ್ರಾಂತೀಯ ಕ್ರೀಡಾಪಟುಗಳು ಹಾಗೂ ದೈಹಿಕ ಶಿಕ್ಷಣ ಶಿಕ್ಷಕರನ್ನು ವಿದ್ಯಾಕೇಂದ್ರ ಸಂಚಾಲಕರಾದ ಡಾ॥ ಪ್ರಭಾಕರ ಭಟ್ ಕಲ್ಲಡ್ಕ ಸನ್ಮಾನಿಸಿದರು.

# ಪದವಿಪೂರ್ವ

ದಿನಾಂಕ 9/02/2016 ರಂದು ಧಾರವಾಡ ವಿಶ್ವವಿದ್ಯಾನಿಲಯದಲ್ಲಿ ನಡೆದ ಕನ್ನಡ ಚರ್ಚಾಸ್ಪರ್ಧೆಯಲ್ಲಿ ಪ್ರಥಮವಿಜ್ಞಾನ ವಿಭಾಗದ ರಾಮನಾರಾಯಣ ಭಾಗವಹಿಸಿರುತ್ತಾರೆ.

* ದಿನಾಂಕ 4/2/2016 ರಿಂದ 9/2/2016 ರವರೆಗೆ ಶ್ರೀರಾಮ ಪದವಿ ಪೂರ್ವ ಕಾಲೇಜು ಹಾಗೂ ನಾರ್ಶಾ ಕಾಲೇಜಿನ ವಿದ್ಯಾರ್ಥಿಗಳಿಗೆ ದ್ವಿತೀಯ ಪಿ.ಯು.ಸಿ.ಯ ಪ್ರಯೋಗ ಪರೀಕ್ಷೆ ನಡೆಯಿತು.

* ದಿನಾಂಕ 24/02/2016 ರಂದು ಪ್ರಥಮ ಪಿ.ಯು.ಸಿ ಯ ವಿದ್ಯಾರ್ಥಿಗಳಿಗೆ ವಾರ್ಷಿಕ ಪರೀಕ್ಷೆ ಪ್ರಾರಂಭವಾಗಿದ್ದು ಸಜೀಪ ಮೂಡ ಕಾಲೇಜಿನ ರಸಾಯನಶಾಸ್ತ್ರ ಉಪನ್ಯಾಸಕರಾದ ಪ್ರಶಾಂತ್ ಕುಮಾರ್ ಪ್ರಶ್ನೆಪತ್ರಿಕಾ ಪಾಲಕರಾಗಿ ಆಗಮಿಸಿರುತ್ತಾರೆ.

* ದಿನಾಂಕ 5/2/2016 ರಂದು ವಿಟಾದ ವತಿಯಿಂದ ಬೇಸಿಗೆ ರಜೆಯಲ್ಲಿ ನಡೆಯುವ ಸ್ಪೀಕಿಂಗ್ ಕೋರ್ಸ್‌ನ ಬಗ್ಗೆ ಪ್ರಥಮ ಪಿ.ಯು.ಸಿ ಯ ವಿದ್ಯಾರ್ಥಿಗಳಿಗೆ ತಿಳಿಸಿಕೊಡಲಾಯಿತು.

*ವಿವೇಕಾನಂದ ತಾಂತ್ರಿಕ ಮಹಾವಿದ್ಯಾಲಯ ಪುತ್ತೂರು, ದಿನಾಂಕ 11/02/2016 ರಂದು, ಶ್ರೀ ವೆಂಕಟರಮಣ ಸ್ವಾಮಿ ಕಾಲೇಜು ಬಂಟ್ವಾಳ ದಿನಾಂಕ 12/02/2016 ರಂದು, ಬೆಸೆಂಟ್ ಮಹಿಳಾ ಕಾಲೇಜು ಮಂಗಳೂರು ಹಾಗೂ ದಿನಾಂಕ 15/02/2016 ರಂದು ಎಂ.ವಿ. ಶೆಟ್ಟಿ ಕಾಲೇಜು ಮಂಗಳೂರು ಇಲ್ಲಿನ ಉಪನ್ಯಾಸಕರು ಭೇಟಿ ನೀಡಿ ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಪಿ.ಯು.ಸಿ ನಂತರದ ವಿದ್ಯಾಭ್ಯಾಸದ ಕುರಿತು ಮಾಹಿತಿ ನೀಡಿದರು.

# ಪದವಿ

## ದಿನಾಂಕ: 04.02.16



ಶ್ರೀನಿವಾಸ ಕಾಲೇಜು ವಳಚ್ಚಿಲು ಇಲ್ಲಿ ನಡೆದ 2016 ಇಂಟರ್ ಕಾಲೇಜು ಸ್ಪರ್ಧೆಯಲ್ಲಿ ನಮ್ಮ ಕಾಲೇಜು ಸಮಗ್ರ ತಂಡ ಪ್ರಶಸ್ತಿ ಪಡೆದಿದೆ.

## ದಿನಾಂಕ: 23.02.16

ಶ್ರೀ ಮಂಜುನಾಥೇಶ್ವರ ಕಾಲೇಜು ಧರ್ಮಸ್ಥಳ ಉಜಿರೆಯಲ್ಲಿ ನಡೆದ ಸಮ್ಯಕ್ ಕಾಮರ್ಸ್ ಫೆಸ್ಟ್ ಇಂಟರ್ ಕಾಲೇಜು ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಾದ ನಿತಿನ್, ಸುಶ್ಮಿತಾ, ಭವ್ಯಶ್ರೀ, ಸಾಯಿಪ್ರಸಾದ್, ಕೃತಿ, ವಿನುತಾ, ಶಿವಾನಂದ, ಮೌಲಸಾಬ್ ಭಾಗವಹಿಸಿರುತ್ತಾರೆ

## ದಿನಾಂಕ 05.02.16

ಮಂಗಳೂರು ವಿಶ್ವವಿದ್ಯಾನಿಲಯ ಕಾಲೇಜು

ಹಂಪನಕಟ್ಟೆಯಲ್ಲಿ ನಡೆದ ಇಂಟರ್ ಕಾಲೇಜು ಸಂಗೀತ ಸ್ಪರ್ಧೆಯಲ್ಲಿ ಕಾವ್ಯಶ್ರೀ, ನವನೀತ, ಪೃಥ್ವಿ, ಸಹನಾ, ಲಾವಣ್ಯ, ಸ್ವಾತಿ ಕೆ, ತೇಜಸ್ವಿನಿ, ಸವಿತಾ, ಕಾರ್ಯಪ್ಪ, ಸ್ವಾತಿ ವೈ, ವಿದ್ಯಾಸರಸ್ವತಿ, ಸ್ವಾತಿಶ್ರೀ, ಹಾಗೂ ಉಪನ್ಯಾಸಕಿ ಅಕ್ಷತಾ ಭಾಗವಹಿಸಿರುತ್ತಾರೆ

## ದಿನಾಂಕ 05.02.16

ಸೈಂಟ್ ಫಿಲೋಮಿನಾ ಕಾಲೇಜು ಪುತ್ತೂರಿನಲ್ಲಿ ನಡೆದ ಅರ್ಥಶಾಸ್ತ್ರ ವಿಭಾಗದ ಇಂಟರ್ ಕಾಲೇಜು ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಾದ ಭಾಗ್ಯಶ್ರೀ, ಶ್ರೀ ರಾಮ್, ಭಾರತಿ, ವಿನೋದ್, ನಿತೇಶ್ ಕುಮಾರ್, ಪ್ರಣಾಮ್, ರಕ್ಷಿತಾ ಶೇನವಾ, ಹರ್ಷಿತಾ ಕುಮಾರಿ ಉಪನ್ಯಾಸಕಿ ಲೀಲಾವತಿ ಭಾಗವಹಿಸಿರುತ್ತಾರೆ.

## ದಿನಾಂಕ 06.02.16

ಕಾಲೇಜಿನ ಎನ್. ಎಸ್. ಎಸ್ ಘಟಕದ ವತಿಯಿಂದ ಕಾಲೇಜು ವಠಾರದಲ್ಲಿ ಒಂದು ದಿನದ ಸ್ವಚ್ಛತೆಯು ನಡೆಯಿತು. ಒಟ್ಟು 70 ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

## ದಿನಾಂಕ 13.02.16

ಬಂಟ್ವಾಳ ತಾಲೂಕು ಕಾರ್ಯನಿರತ ಪತ್ರಕರ್ತರ ಸಂಘ, ಪ್ರೆಸ್ ಕ್ಲಬ್ ಬಂಟ್ವಾಳ, ಹಾಗೂ ಬಂಟ್ವಾಳ ಪತ್ರಕರ್ತರ ಸಂಘದ ರಜತ ವರ್ಷಾಚರಣೆ ಸಮಿತಿ ಆಶ್ರಯದಲ್ಲಿ ನಡೆದ "ಫೋಟೋಗ್ರಫಿ ಕುರಿತು ಆಸಕ್ತ ವಿದ್ಯಾರ್ಥಿಗಳಿಗೆ ಕಾರ್ಯಗಾರ"ದಲ್ಲಿ ಪದವಿ ವಿಭಾಗದ ವಿದ್ಯಾರ್ಥಿಗಳಾದ ನವನೀತ್ ಕುಮಾರ್, ಭಾರತಿ ಕೆ, ಮನೀಷ್, ದೀಪಕ್ ನಾಯಕ್, ವಿಘ್ನೇಶ್ ಭಾಗವಹಿಸಿರುತ್ತಾರೆ.

## ಮೂವಿ ಮೇಕಿಂಗ್ 05.02.16



ಕಾಲೇಜಿನ ಪ್ರಬೋಧ ವಾಣಿಜ್ಯ ಸಂಘದ ವತಿಯಿಂದ ವಿಡಿಯೋ ಕ್ಲಿಪಿಂಗ್ ಸ್ಪರ್ಧೆಯೂ ನಡೆಯಿತು. ನಿರ್ಣಾಯಕರಾಗಿ ಅನಘಾ ಡಿಜಿಟಲ್‌ನ ಮಾಲೀಕರಾದ ಲೋಹಿತ್ ಹಾಗೂ ಪ್ರಾಂಶುಪಾಲ ಕೃಷ್ಣಪ್ರಸಾದ ಮತ್ತು ಕುಶಾಲಪ್ಪ ಉಪಸ್ಥಿತರಿದ್ದರು. ಒಟ್ಟು 07 ತಂಡಗಳು ಭಾಗವಹಿಸಿತ್ತು. ಶ್ರೀರಾಮ ವಿದ್ಯಾಕೇಂದ್ರ ಸಾಗಿಬಂದ ದಾರಿ ಎಂಬ ಎಂಬ ವಿಷಯದ ಬಗ್ಗೆ ಈ ಸ್ಪರ್ಧೆ ನಡೆಯಿತು.

## ದಿನಾಂಕ 01.02.16

ಚಾಂಪಿಯನ್ ಕೋಚಿಂಗ್ ತರಬೇತಿ ಮಂಗಳೂರು ಇಲ್ಲಿನ ನಿರ್ದೇಶಕರಾದ ವಿಕಾಸ್ ಇವರು ಬ್ಯಾಂಕಿಂಗ್ ಆಸಕ್ತ ವಿದ್ಯಾರ್ಥಿಗಳಿಗೆ ಮಾಹಿತಿ ನೀಡಿದರು.

## ದಿನಾಂಕ 08.02.16



ಮಂಗಳೂರು ವಿಶ್ವವಿದ್ಯಾನಿಲಯ ಮಾನವಪ್ರಜ್ಞೆ ಮತ್ತು ಯೋಗ ವಿಜ್ಞಾನ ವಿಭಾಗ ಕೋಣಾಜೆ ಇಲ್ಲಿನ ಯೋಗ ಸ್ನಾತಕೋತ್ತರ ವಿದ್ಯಾರ್ಥಿಗಳಾದ ದೀಪಾ ಮತ್ತು ಶುಭಾ ಇವರು ಪ್ರತಿದಿನ ಸಂಜೆ ಸುಮಾರು 32 ವಿದ್ಯಾರ್ಥಿಗಳಿಗೆ ಒಂದು ತಿಂಗಳ ಕಾಲ ಯೋಗ ತರಬೇತಿ ನಡೆಸಿದರು.

## ದಿನಾಂಕ 13.02.16

ವೀರಯೋಧ ಹನುಮಂತಪ್ಪ ಇವರಿಗೆ ದಿನಾಂಕ 13ರ ಸರಸ್ವತಿ ವಂದನೆಯಲ್ಲಿ ಶ್ರದ್ಧಾಂಜಲಿ ಸಲ್ಲಿಸಲಾಯಿತು. ಪ್ರಾಂಶುಪಾಲ ಕೃಷ್ಣಪ್ರಸಾದರು ವೀರಯೋಧನ ಸಾಧನೆ ಹಾಗೂ ಸಿಯಾಚಿನ್ ಯುದ್ಧ ಭೂಮಿಯ ಬಗ್ಗೆ ತಿಳಿಸಿಕೊಟ್ಟರು.

## ಅಂತರಾಷ್ಟ್ರೀಯ ಮಟ್ಟದ ವಿಚಾರಸಂಕಿರಣದಲ್ಲಿ ಭಾಗಿ :

ಸ್ನಾತಕೋತ್ತರ ವಿಭಾಗದ ಅಂತರಾಷ್ಟ್ರೀಯ ಮಟ್ಟದ ಗ್ರೀನ್ ಬ್ಯಾಂಕಿಂಗ್ ಫಾರ್ ಗ್ರೀನ್ ಇಂಡಸ್ಟ್ರೀ & ಎಕಾನಮಿ ಎಂಬ ವಿಷಯದ ಬಗ್ಗೆ ದಿನಾಂಕ 11,12,13ರಂದು ರಾಣಿ ಚೆನ್ನಮ್ಮ ವಿಶ್ವವಿದ್ಯಾನಿಲಯ ಬೆಳಗಾವಿಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ವಾಣಿಜ್ಯ ಉಪನ್ಯಾಸಕಿ ಸೌಮ್ಯ ಇವರು ಭಾಗವಹಿಸಿ Green Banking the bank Employee's percepective ಎಂಬ ವಿಷಯ ಮಂಡನೆ ಮಾಡಿದರು.

## ಸ್ವಚ್ಛತಾ ಸಪ್ತಾಹ 12.02.16–19.02.16

ಪದವಿ ವಿಭಾಗದ ಪ್ರಣವ ವಿದ್ಯಾರ್ಥಿ ಸಂಘವು ದಿನಾಂಕ 12.02.2016ರಿಂದ 19.02.2016ರವರೆಗೆ




ಸ್ವಚ್ಛತಾ ಸಪ್ತಾಹ "ಪ್ಲಾಸ್ಟಿಕ್ ಹಾಗೂ ಕಸ ಮುಕ್ತ ಕ್ಯಾಂಪಸ್" ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು. ಈ ಸಪ್ತಾಹದ ಉದ್ಘಾಟನೆಯನ್ನು ಕಲ್ಲಮುಂಡ್ಕೂರು ಗ್ರಾಮಪಂಚಾಯತ್‌ನ ಪಿ.ಡಿ.ಒ. ಬಿ.ಉಗ್ಗಪ್ಪ ಮೂಲ್ಯ ಇವರು 12.02.2016 ರಂದು ಸಂಜೆ 3:00 ಗಂಟೆಗೆ ಉದ್ಘಾಟಿಸಿ ಕಸದಿಂದ ರಸ/ ಪೈಪ್ ಕಾಂಪೋಸ್ಟ್‌ನ ಪ್ರಾತ್ಯಕ್ಷಿಕೆ ನಡೆಸಿಕೊಟ್ಟರು. 2ನೇ ದಿನದ ಕಾರ್ಯಕ್ರಮವನ್ನು ಪ್ರದ್ಯೋತ ಸಂಸ್ಕೃತ ಸಂಘವು ವಹಿಸಿಕೊಂಡಿತ್ತು. ಸಪ್ತಾಹದಲ್ಲಿ ಭಾಗವಹಿಸುವ ಎಲ್ಲರಿಗೂ ಕಂಕಣವನ್ನು ಕಟ್ಟಿ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಶ್ರೀರಾಮ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾದ ರಮೇಶ್ ಪ್ರೇರಣೆ ನೀಡಿದರು. 3ನೇ ದಿನದಂದು ಕಾಲೇಜಿನ ಎನ್.ಎಸ್.ಎಸ್. ಘಟಕದ ವತಿಯಿಂದ ನಗರ ಸ್ವಚ್ಛತೆ ಕಾರ್ಯಕ್ರಮ ನಡೆಯಿತು.



ಸ್ವಚ್ಛತಾ ಸಪ್ತಾಹದ 4ನೇ ದಿನದಂದು ಪ್ರದೀಪ್ತ ಸಾಂಸ್ಕೃತಿಕ ಸಂಘದ ವತಿಯಿಂದ ಸ್ವಚ್ಛತೆಯ ಅರಿವು ಮೂಡಿಸುವ ಬೀದಿನಾಟಕ ವಿದ್ಯಾರ್ಥಿಗಳಿಂದ ಕಲ್ಲಡ್ಕ ಪೇಟೆಯಲ್ಲಿ ನಡೆಯಿತು.



5ನೇ ದಿನ ಶಾಲಾ ಬಸ್‌ನಲ್ಲಿ ಪ್ರಯಾಣಿಸುವ ಪ್ರಯಾಣಿಕರಿಗೆ ಮಾಹಿತಿ ಕಾರ್ಯಗಾರವು ಪದವಿ ವಿಭಾಗದ ಪ್ರತಾಪ ಕ್ರೀಡಾಸಂಘದ ವತಿಯಿಂದ ನಡೆಯಿತು. ಕಾರ್ಯಕ್ರಮದಲ್ಲಿ ದೈಹಿಕ ಶಿಕ್ಷಕರಾದ ರಾಧಾಕೃಷ್ಣ ಅಡ್ಯಂತಾಯ ಮಾತನಾಡಿ, ನಮ್ಮ ದೇಹ ಸ್ವಚ್ಛತೆಯಂತೆ ಪರಿಸರ ಸ್ವಚ್ಛತೆಯೂ ಅತೀ ಅಗತ್ಯ. ಬಸ್ಸಿನಲ್ಲಿ ಕಸದ ಬುಟ್ಟಿಗಳ ಅಗತ್ಯತೆಯ ಬಗ್ಗೆ ಹೇಳಿದರು.






ಕಾಸರಗೋಡು ಜಿಲ್ಲೆಯ ಪೆರ್ಲದಲ್ಲಿ ನಮ್ಮ ಮಾತೃಸಂಸ್ಥೆ ವಿವೇಕಾನಂದ ವಿದ್ಯಾವರ್ಧಕ ಸಂಘದಿಂದ ನಡೆಸಲ್ಪಡುವ ನಾಳಂದ ಪದವಿ ಕಾಲೇಜಿನ ನೂತನ ಆಡಳಿತ ಕಛೇರಿಯ ಉದ್ಘಾಟನಾ ಕಾರ್ಯಕ್ರಮವು ದಿನಾಂಕ 13-2-2016ರಂದು ನಡೆಯುವ ಈ ಸಂದರ್ಭದಲ್ಲಿ ಶ್ರೀರಾಮ ವಿದ್ಯಾಕೇಂದ್ರದ ಸಂಚಾಲರು ಡಾ| ಪ್ರಭಾಕರ ಭಟ್ ಮತ್ತು ಶಾಲಾಭಿವೃದ್ಧಿ ಸಮಿತಿಯ ಸದಸ್ಯರು ಹಾಗೂ ಶಿಕ್ಷಕ ಶಿಕ್ಷಕೇತರ ವೃಂದದವರು ಭಾಗವಹಿಸಿ, ಶುಭಹಾರೈಸಿದರು.

ಆರನೇ ದಿನದ ಸ್ವಚ್ಛತಾ ಸಪ್ತಾಹದ ಕಾರ್ಯಕ್ರಮದಲ್ಲಿ ಕಸ ವಿಲೇವಾರಿ, ಕಸದ ತೊಟ್ಟಿ, ಸ್ವಚ್ಛತೆ, ಪ್ರಜ್ಞಾನ ಕನ್ನಡ ಮತ್ತು ಸಾಹಿತ್ಯ ಸಂಘದ ವತಿಯಿಂದ ನಡೆಯಿತು.

19.02.2016 ರಂದು ಸಮಾರೋಪ ಕಾರ್ಯಕ್ರಮವನ್ನು ಪ್ರಭೋದ ವಾಣಿಜ್ಯ ಸಂಘವು ವಹಿಸಿಕೊಂಡಿತ್ತು. ವಿದ್ಯಾಸಂಸ್ಥೆಯ ಸಂಚಾಲಕ ಡಾ. ಪ್ರಭಾಕರ್ ಭಟ್ ಮಾಣನಾಡಿ, ಪದವಿ ವಿದ್ಯಾರ್ಥಿಗಳಿಗೆ ಯಾವುದೇ ವಿಷಯವನ್ನು ತಿಳಿಸಿದಾಗ ವಿಚಾರ ಮಾಡುವಂತಹ ತಿಳುವಳಿಕೆ ಇರುತ್ತದೆ. ಅದನ್ನು ಹೇಳಿಕೊಡಬೇಕಾಗಿಲ್ಲ ತಾವಾಗಿಯೇ ನಿರ್ಧಾರ ಕೈಗೊಳ್ಳುವಲ್ಲಿ ಬುದ್ಧಿವಂತರು. ಹಾಗೆಯೇ ಸ್ವಚ್ಛ ಕಾರ್ಯಕ್ರಮದ ಬಗ್ಗೆ ಕರೆಕೊಟ್ಟಾಗ ಆಸಕ್ತಿಯಿಂದ ಮುಂದುವರಿದ ವಿದ್ಯಾರ್ಥಿಗಳು ಪದವಿಯವರು ಎಂದು ಹೇಳಿದರು. ಪದವಿಪೂರ್ವ ವಿಭಾಗದ ಪ್ರಾಂಶುಪಾಲ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ 7 ದಿನದ ವಿಡಿಯೋ ಕ್ಲಿಪ್ ಪ್ರದರ್ಶಿಸಲಾಯಿತು. ನಮ್ಮ ನಿಮ್ಮ ನಡೆ ಸ್ವಚ್ಛತೆಯೆಡೆ–Clean campus, Clean environment ಎಂಬ ಸಂದೇಶದ ಮೂಲಕ ಈ ಕಾರ್ಯಕ್ರಮ ನಡೆಯಿತು.

## ಸ್ಥಳೀಯ ವಿಚಾರಣಾ ಸಮಿತಿ 23.02.16

ಮಂಗಳೂರು ವಿಶ್ವವಿದ್ಯಾನಿಲಯ ಕೋಣಾಜೆ ಇಲ್ಲಿನ ಸ್ಥಳೀಯ ವಿಚಾರಣಾ ಸಮಿತಿಯು ಪದವಿ ವಿಭಾಗಕ್ಕೆ ಭೇಟಿ ನೀಡಿ ಕಾಲೇಜಿನ ಕಾರ್ಯ ಚಟುವಟಿಕೆಗಳ ವೀಕ್ಷಣೆ, ಗ್ರಂಥಾಲಯ ಮತ್ತು ಪುಸ್ತಕಗಳ ಮಾಹಿತಿ, ಸೌಲಭ್ಯಗಳ ಮಾಹಿತಿ, ಕಛೇರಿಯ ದಾಖಲೆಗಳ, ಲೆಕ್ಕಾಚಾರಗಳ ವಿಚಾರಣೆ, ಕಟ್ಟಡ, ತರಗತಿ ವೀಕ್ಷಣೆ ನಡೆಸಿತು. ಸಮಿತಿಯಲ್ಲಿ ನಿರ್ದೇಶಕರುಗಳಾದ ಡಾ. ಶಿವರಾಮ್ ಶೆಟ್ಟಿ ಡಾ| ಉಮೇಶ್ ನಾಯಕ್ ಹಾಗೂ ಶ್ರೀಮತಿ ಪ್ರೀತಿ ಡಿ'ಸೋಜ ಉಪಸ್ಥಿತರಿದ್ದರು.

## ದಿನಾಂಕ 24.02.16



ಫೆಬ್ರವರಿ ತಿಂಗಳ ಮಾಸಿಕ ಭಜನೆಯನ್ನು ದ್ವಿತೀಯ ಬಿ.ಕಾಂನ ಸಂಸ್ಕೃತ ವಿದ್ಯಾರ್ಥಿಗಳು ನಡೆಸಿಕೊಟ್ಟರು. ಇದೇ ಸಂದರ್ಭದಲ್ಲಿ ಆ ತಿಂಗಳಲ್ಲಿ ಹುಟ್ಟಿದ ವಿದ್ಯಾರ್ಥಿಗಳು ಶ್ರದ್ಧಾ ನಿಧಿ ಸಮರ್ಪಣೆ ಮಾಡಿದರು.

## ಕಲ್ಲಡ್ಕ ಶ್ರೀರಾಮ ವಿದ್ಯಾಕೇಂದ್ರ ವಂಡರ್‌ಲಾ–ಪ್ರಕೃತಿಸ್ನೇಹಿ ಪ್ರಶಸ್ತಿ




ಬೆಂಗಳೂರು ಪ್ರತಿಷ್ಠಿತ ಸಂಸ್ಥೆ ವಂಡರ್‌ಲಾ ಹಾಲಿಡೇಸ್ ಲಿಮಿಟೆಡ್ ಇದರ ವತಿಯಿಂದ ನೀಡಲಾಗುವ 2015–16ನೇ ಸಾಲಿನ ಪರಿಸರ ಸ್ನೇಹಿ ಪ್ರಶಸ್ತಿಯನ್ನು ಕಲ್ಲಡ್ಕದ ಶ್ರೀರಾಮ ವಿದ್ಯಾಕೇಂದ್ರ ಪಡೆದುಕೊಂಡಿದೆ. ವಿದ್ಯಾಕೇಂದ್ರದ ಪರಿಸರಕ್ಕೆ ಭೇಟಿ ನೀಡಿದ ಅಲ್ಲಿನ ತಂಡ ವಿದ್ಯಾಸಂಸ್ಥೆಯ ಎಲ್ಲಾ ಶೈಕ್ಷಣಿಕ ಚಟುವಟಿಕೆಗಳ ಜೊತೆ ಜೊತೆಗೆ ಪ್ರಾಕೃತಿಕವಾಗಿಯೂ ಉತ್ತಮವಾದ ವಾತಾವರಣ ಇಲ್ಲಿರುವುದನ್ನು ಗಮನಿಸಿ ಈ ಪ್ರಶಸ್ತಿ ನೀಡಿದೆ. ಶಿಶುಮಂದಿರ, ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗಗಳಲ್ಲಿರುವ ಶಾಲಾ ಕೈತೋಟ, ಉದ್ಯಾನವನ, ಹಾಗೂ ಪಶು-ಪಕ್ಷಿಗಳ ಪಾಲನೆ ಪೋಷಣೆಗೆ ಅದರ ಸ್ವಚ್ಛತೆ, ರಕ್ಷಣೆ ಇತ್ಯಾದಿಗಳನ್ನು ಸೂಕ್ಷ್ಮವಾಗಿ ತಂಡ ಪರಿಶೀಲಿಸಿದೆ.

ನೀರಿನ ಸಮರ್ಪಕ ಬಳಕೆ ಹಾಗೂ ವಾತಾವರಣದಲ್ಲಿನ ಸ್ವಚ್ಛತೆಯನ್ನು ಗಮನಿಸಿ ಈ ಪ್ರಶಸ್ತಿಗೆ ಆಯ್ಕೆಮಾಡಿದೆ. ತಾ. 05.02.16 ರಂದು ಬೆಂಗಳೂರಿನ ವಂಡರ್‌ಲಾದ ಆವರಣದಲ್ಲಿ ನಡೆದ ಬೃಹತ್ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಸಂಸ್ಥೆಯ ಮುಖ್ಯಸ್ಥರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಈ ಪ್ರಶಸ್ತಿಗೆ ಭಾಜನರಾದ ವಿದ್ಯಾಸಂಸ್ಥೆಯನ್ನು ಶ್ರೀರಾಮ ಶಾಲಾಭಿವೃದ್ಧಿ ಸಮಿತಿಗಳು, ಸ್ಥಳೀಯ ಯುವಕ ಮಂಡಲಗಳು, ಹಿರಿಯ ವಿದ್ಯಾರ್ಥಿ ಸಂಘ ಹಾಗೂ ಅಪಾರ ಹಿರಿಯ ವಿದ್ಯಾರ್ಥಿಗಳು ಅಭಿನಂದಿಸಿದ್ದಾರೆ.


Postal Regn No. PTR/133/2015-17 Licensed to Post without pre-payment License No.: SK/WPP/PTR/177/2015-17

ಸರಯೂ

Vol. : 2 Issue : 12

KARKAN/2014/62363
Posted at Kalladka P.O. on 10th and 15th of Every month

BOOK POST

ಸವಿಧೇ,



SRI RAMA VIDYAKENDRA TRUST (R.) Hanuman Nagar, Kalladka, Bantwal Tq., Dakshina Kannada, Karnataka 574 222
Ph.: 08255-275273 / 275183 / 275073 / 275693 / 279673 / 200085 / 279479
Website : www.srvk.org E-mail : info@srvk.org



Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 08255-275 273. Printed at Anagha Digital Square, Kaikamba, B.C. Road - 574 219, Bantwal Tq., Dakshina Kannada, Karnataka. Registration No. : KARKAN/2014/62363




# ಶ್ರೀರಾಮ ವಿದ್ಯಾಕೇಂದ್ರ

ಹನುಮಾನ್ ನಗರ, ಕಲ್ಲಡ್ಕ, ಬಂಟ್ವಾಳ ತಾಲೂಕು, ದ.ಕ. 574 222

## ಸಮಗ್ರ ಶಿಕ್ಷಣ ಪರಿಪೂರ್ಣ ವ್ಯಕ್ತಿತ್ವ

**ಕಲ್ಲಡ್ಕ.....**
ಮಂಗಳೂರು–ಬೆಂಗಳೂರು ರಾಷ್ಟ್ರೀಯ ಹೆದ್ದಾರಿ (N.H 75) ಪಕ್ಕದಲ್ಲಿರುವ ಒಂದು ಪುಟ್ಟ ಹಳ್ಳಿ. ಸಂಘದ ಶಾಖೆಯ ಮೂಲಕ ಸಾಮಾಜಿಕವಾಗಿ ಅರಳಿದ ಭಾರತೀಯ ಶಿಕ್ಷಣದ ಪುಷ್ಪ ಶ್ರೀರಾಮ ವಿದ್ಯಾಕೇಂದ್ರ.

ಅರಳುತ್ತಾ ಹೋದಂತೆ ತನ್ನ ಸುಗಂಧವನ್ನು ಪ್ರಾಂತ, ರಾಷ್ಟ್ರದೆಡೆಗೆ ಪಸರಿಸುತ್ತ, ಹತ್ತನೇ ತರಗತಿಯವರೆಗೆ **ಮಾತೃಭಾಷೆಯಲ್ಲೇ ಉಚಿತವಾಗಿಯೇ ಶಿಕ್ಷಣವನ್ನು ನೀಡುವ ಈ ಕಾರ್ಯಕ್ಕೆ ಇದೀಗ 35ರ ಹರೆಯ....**

ಪ್ರಸ್ತುತ ಶಿಶುಮಂದಿರದಿಂದ ಪದವಿಯವರೆಗೆ 3130+ ವಿದ್ಯಾರ್ಥಿಗಳನ್ನು ಹೊಂದಿರುವ ವಿದ್ಯಾಕೇಂದ್ರ ಸಮಾಜ ಪರಿವರ್ತನೆಯ ತನ್ನ ಕೈಂಕರ್ಯದಲ್ಲಿ ದಾಪುಗಾಲನ್ನಿಟ್ಟು ಮುಂದುವರಿಯುತ್ತಿದೆ.

### ಶ್ರೀರಾಮ ಸಮಗ್ರ ಶಿಶು ಶಿಕ್ಷಣ ಕೇಂದ್ರ :

3½ ಯಿಂದ 5½ ವಯೋಮಾನದ 160+ ಶಿಶುಗಳಿಗೆ ಪಂಚಕೋಶಾತ್ಮಕ ವಿಕಾಸದ ಚಟುವಟಿಕೆಗಳನ್ನು ವೈಜ್ಞಾನಿಕವಾಗಿ ಭಾರತೀಯ ಪರಂಪರೆಗೆ ಅನುಗುಣವಾಗಿ ನೀಡುವ ತಾಣ. ತಾಲೂಕಿನ 4 ಅನ್ಯ ಕೇಂದ್ರಗಳಲ್ಲಿ ಶಿಶುಮಂದಿರಗಳು. ಸಂಖ್ಯೆ : 144



### ಶ್ರೀರಾಮ ಪೂರ್ವಗುರುಕುಲ :

1ರಿಂದ 4ನೇ ತರಗತಿಯ 480+ ಮಕ್ಕಳಿಗೆ ಶಿಶುಶಿಕ್ಷಣದ ಮಾದರಿಯಲ್ಲೇ ಮಗುವಿನ ಸರ್ವಾಂಗೀಣ ವಿಕಾಸಕ್ಕೆ ಚಟುವಟಿಕೆಗಳ ಮೂಲಕ ಮಾತೃ ಭಾಷಾ (ಕನ್ನಡ) ಮಾಧ್ಯಮದಲ್ಲಿ ಶಿಕ್ಷಣ – ಸಂಸ್ಕೃತದ ಜೊತೆಗೆ ಇಂಗ್ಲೀಷ್ ಭಾಷೆಯನ್ನು ಸದೃಢಗೊಳಿಸುವ ವ್ಯವಸ್ಥೆ.



### ಶ್ರೀರಾಮ ಹಿರಿಯ ಪ್ರಾಥಮಿಕ ಶಾಲೆ :

5, 6, 7ನೇ ತರಗತಿಯ 390+ ಮಕ್ಕಳಿಗೆ ರಾಜ್ಯದ ಪಠ್ಯಕ್ರಮದಲ್ಲಿ ಚಟುವಟಿಕೆಯುಕ್ತ ಸಂಸ್ಕಾರಬದ್ಧ ಹಾಗೂ ಮಾತೃಭಾಷಾ ಮಾಧ್ಯಮದಲ್ಲಿ ಕಲಿಕೆ. ಪ್ರತಿಯೊಂದು ಮಗುವಿನ ಪ್ರತಿಭೆಯನ್ನು ಪೂರ್ಣ ಪ್ರಮಾಣದಲ್ಲಿ ಅರಳಿಸಿ ಬೆಳೆಸುವ ಮಾತೃ ಹೃದಯದ ಶಿಕ್ಷಣ. ಸಂಸ್ಕೃತ, ಇಂಗ್ಲೀಷ್ ಭಾಷಾ ಕಲಿಕೆಯ ಮುಂದುವರಿಕೆ.



### ಶ್ರೀರಾಮ ಪ್ರೌಢಶಾಲೆ :

8, 9, 10ನೇ ತರಗತಿಯ 870+ ವಿದ್ಯಾರ್ಥಿಗಳಿಗೆ ರಾಜ್ಯ ಪಠ್ಯಕ್ರಮದ ಕನ್ನಡ ಮಾತೃ ಭಾಷಾ ಮಾಧ್ಯಮದ ಉಚಿತ ಶಿಕ್ಷಣ ಸಮವಸ್ತ್ರ ಪಠ್ಯ ಹಾಗೂ ಬರೆಯುವ ಪುಸ್ತಕ ಮಧ್ಯಾಹ್ನ ಭೋಜನಗಳೂ ಉಚಿತ. ವಿದ್ಯಾಕೇಂದ್ರದ ಸುತ್ತುಮುತ್ತಲಿನ ಹಳ್ಳಿಗಳಲ್ಲಿ ಆರ್ಥಿಕ ಹಾಗೂ ಸಾಮಾಜಿಕ ಹಿಂದುಳಿಯುವಿಕೆಯಿಂದಾಗಿ 10ನೇ ತರಗತಿಯವರೆಗಿನ ಶಿಕ್ಷಣದಿಂದ ಯಾವುದೇ ಮಗು ವಂಚಿತವಾಗಬಾರದೆಂಬುದು ನಮ್ಮ ಧ್ಯೇಯ.



### ಶ್ರೀರಾಮ ಪದವಿಪೂರ್ವ ಕಾಲೇಜು :

ವಾಣಿಜ್ಯ ಕಲಾ ಹಾಗೂ ವಿಜ್ಞಾನ ವಿಭಾಗಗಳಲ್ಲಿ 750+ ವಿದ್ಯಾರ್ಥಿಗಳು ಸಂಸ್ಕಾರಯುತ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳುತ್ತಾ ಸಂವೇದನಾಶೀಲ ಯುವ ಮನಸ್ಸುಗಳ ನಡುವೆ ಸಾಮರಸ್ಯದ ಬೆಳವಣಿಗೆಗೆ ಪ್ರೇರಣೆ. ಜೀವನದ ಲಕ್ಷ್ಯಸಿದ್ಧಿಗಾಗಿ ತರಬೇತಿ.



### ಶ್ರೀರಾಮ ಪದವಿ ಕಾಲೇಜು :

ಬಿ.ಎ. ಮತ್ತು ಬಿ.ಕಾಂ ಪದವಿಗಳಿಗಾಗಿ ದಾಖಲಾಗುವ 400+ ವಿದ್ಯಾರ್ಥಿಗಳಲ್ಲಿ ಸ್ಥೈರ್ಯ ಧೈರ್ಯಗಳನ್ನು ಮೂಡಿಸಿ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ತನ್ನ ವ್ಯಕ್ತಿತ್ವದ ಬೆಳವಣಿಗೆಯನ್ನು ಕಂಡುಕೊಳ್ಳುವ ವಿಶ್ವವಿದ್ಯಾಲಯದ ಶಿಕ್ಷಣ.



### ಶ್ರೀರಾಮ ವಸತಿ ನಿಲಯ :

ಐದರಿಂದ ಪದವಿಯವರೆಗಿನ 300+ ಬಾಲಕ ಬಾಲಕಿಯರಿಗೆ ಮನೆಯ ಸಂಸ್ಕಾರದ ಜೊತೆಗೆ ಶಿಸ್ತುಬದ್ಧ ದಿನಚರಿಯನ್ನು, ಕಲಿಕೆಯ ಪ್ರಗತಿಯೊಂದಿಗೆ ಪ್ರತಿಭೆಯ ವಿಕಾಸಕ್ಕೆ ಅನುವು ಮಾಡುವ ಶುದ್ಧ ಸಸ್ಯಾಹಾರಿ ಆಶ್ರಯಗೃಹ.

08255-275273, 279673 (ಟ್ರಸ್ಟ್), 275479 (ಶಿಶುಮಂದಿರ), 275073 (ಪ್ರಾಥಮಿಕ)
275183 (ಪ್ರೌಢ), 275693 (ಪದವಿಪೂರ್ವ), 200085 (ಪದವಿ), 275293 (ವಸತಿ)
9480228273 (C.E.O.) 9483292438 (P.R.O.)
info@srvk.org srvk.official srvkkalladka Web : www.srvk.org

**ಸಮಾಜಮುಖಿ ಕಾರ್ಯಕ್ರಮಗಳು**

1. ಮುಕ್ತ ಪ್ರವೇಶ
2. ಆಗತ ಸ್ವಾಗತ
3. ಸರಸ್ವತಿ ವಂದನ
4. ಯೋಗ ಶಿಕ್ಷಣ
5. ಗಣಕ ಶಿಕ್ಷಣ
6. ಮಧ್ಯಾಹ್ನದ ಉಚಿತ ಭೋಜನ
7. ಸಂಗೀತ ತರಗತಿ
8. ಶಾಸ್ತ್ರೀಯ ನೃತ್ಯ ತರಗತಿ
9. ಸ್ಮಾರ್ಟ್ ಕ್ಲಾಸ್
10. ಹಾರ್ಮೋನಿಯಂ ತಬ್ಲಾ ಕ್ಲಾಸ್
11. ವ್ಯಕ್ತಿತ್ವ ವಿಕಸನ ಶಿಬಿರಗಳು
12. ಪರಿಸರ ದಿನಾಚರಣೆ
13. ಗುರುವಂದನಾ
14. ರಕ್ಷಾಬಂಧನ
15. ರಾಷ್ಟ್ರೀಯ ಹಬ್ಬಗಳು
16. ಸಂಸ್ಕೃತ ಸಪ್ತಾಹ
17. ಸಂಸ್ಕೃತ ಸಂಭಾಷಣೆ ಶಿಬಿರ
18. ಪೋಷಕರ ಸಮಾವೇಶಗಳು
19. ಸಾಮೂಹಿಕ ಹುಟ್ಟು ಹಬ್ಬ
20. ಮಾಸಿಕ ಭಜನೆ
21. ದೀಪಾವಳಿ
22. ಸರಸ್ವತಿ ಪೂಜೆ
23. ಮನೆ ಮದ್ದು ಶಿಬಿರ
24. ಯೋಗ ಶಿಬಿರ
25. ಕರಾಟೆ ತರಗತಿ
26. ಕರಕುಶಲ ತರಬೇತಿ
27. ಅಂತರ್ಜಾಲ ಪ್ರಪಂಚ
28. ಸೂರ್ಯ ನಮಸ್ಕಾರ ಯಜ್ಞ
29. ಯೋಗಾಸನ ತರಬೇತಿ
30. ಹೊರ ಸಂಚಾರ–ಪ್ರವಾಸ
31. ವಿಚಾರ ಸಂಕಿರಣ
32. ಸಿ.ಎ.ಸಿ.ಪಿ.ಟಿ. ತರಬೇತಿ
33. ಸಿ.ಇ.ಟಿ. ತರಬೇತಿ
34. ಪ್ರಶಿಕ್ಷಣ ಘಟಕಗಳು
35. ವೃಕ್ಷಾರೋಪಣ
36. ಜಲ ಸಂರಕ್ಷಣೆ
37. ಜ್ಞಾನ ವಿಜ್ಞಾನ ಚಟುವಟಿಕೆ
38. ಎಸ್.ಎಸ್.ಎಲ್.ಸಿ. ಕೋಚಿಂಗ್
39. ಕ್ರೀಡಾ ತರಬೇತಿ
40. ಶಾಲಾ ವನ ನಿರ್ಮಾಣ
41. ಕೃಷಿ ಕಾರ್ಯ ತರಬೇತಿ
42. ಶಿಕ್ಷಕರ ಕಾರ್ಯಾಗಾರ
43. ಬಾಲಿಕಾ ಶಿಕ್ಷಣ
44. ಕ್ರೀಡೋತ್ಸವ
45. ಪ್ರತಿಭಾ ದಿನೋತ್ಸವ
46. ಪ್ರತಿಭಾ ಪುರಸ್ಕಾರ
47. ಘೋಷ್ ತರಬೇತಿ
48. ವಾರ್ಷಿಕ ಸಂಚಿಕೆಗಳು
49. ಕುದುರೆ ಸವಾರಿ
50. ವಿಜ್ಞಾನಿಗಳೊಂದಿಗೆ ಸಂವಾದ
51. ಉದ್ಯೋಗ ಮಾಹಿತಿ
52. ಮಿಲಿಟರಿ ಶಿಕ್ಷಣ
53. ಪ್ರಕೃತಿ ಮಧ್ಯೆ ಶಿಕ್ಷಣ
54. ಬೇಸಿಗೆ ಶಿಬಿರಗಳು
55. ಜಲ ಸಾಕ್ಷರತೆ, ಜಾಗೃತಿ
56. ಸಂವೇದನಾಶೀಲ ಸ್ಥಳಗಳ ಭೇಟಿ
57. ದೀಪ ಪ್ರದಾನ ಕಾರ್ಯಕ್ರಮ
58. ಸಾಮಾಜಿಕ ನ್ಯಾಯದ ಆಂದೋಲನಗಳು
59. ಹಲಸಿನ ಮೇಳ
60. ಕೆಸರುಗದ್ದೆ ಕ್ರೀಡಾಕೂಟ
61. ಕಾನೂನು ಮಾಹಿತಿ ಶಿಬಿರ
62. ರಾಷ್ಟ್ರೀಯ ಸೇವಾ ಶಿಬಿರಗಳು

**ಸಮಾಜಮುಖಿ ಕಾರ್ಯಕ್ರಮಗಳು**

1. ಉಚಿತ ಆಯುರ್ವೇದ ಶಿಬಿರಗಳು
2. ಉಚಿತ ವೈದ್ಯಕೀಯ ಶಿಬಿರಗಳು
3. ಸ್ವ–ಉದ್ಯೋಗ ತರಬೇತಿ ಕೇಂದ್ರ
4. ನವದಂಪತಿ ಸಮಾವೇಶ
5. ವರಮಹಾಲಕ್ಷ್ಮೀ ಪೂಜೆ
6. ಮಕ್ಕಳ ದತ್ತು ಸ್ವೀಕಾರ
7. ದೀಪ ಪೂಜನ
8. ಭಾರತ ಮಾತಾ ಪೂಜನಾ
9. ಯೋಗ ತರಗತಿಗಳು
10. ಮಾತೃ ಸಮಾವೇಶ
11. ಗೋಪೂಜೆ
12. ಮಾತೃ ಮಂಡಳಿ
13. ಕಿಶೋರ ಭಾರತಿ
14. ಗೋ–ಸೇವಾ ಕೇಂದ್ರ
15. ವಯಸ್ಕರ ಶಿಕ್ಷಣ
16. ನೇತ್ರದಾನ ರಕ್ತದಾನ
17. ಉನ್ನತ ಶಿಕ್ಷಣಕ್ಕೆ ಸಹಾಯ
18. ಅಕ್ಷರಾಭ್ಯಾಸ
19. ಜಲ ಸಂರಕ್ಷಣೆ
20. ಶ್ರೀ ಕೃಷ್ಣ ಲೋಕ
21. ಆಯುಧ ಪೂಜೆ
22. ವಾಹನ ಪೂಜೆ
23. ಕೈಗಾರಿಕಾ ಕೇಂದ್ರದ ಭೇಟಿ
24. ತುಳಸಿ ಪೂಜೆ
25. ಸೇವಾ ದಿನಾಚರಣೆ
26. ಶ್ರಮ ಸೇವೆಗಳು
27. ಸ್ಥಾನೀಯ ಪಾಲಕರ ಸಮಾವೇಶ
28. ಬಾಲ ಗೋಕುಲ
29. ವ್ಯಸನಮುಕ್ತ ಸಮಾಜ ನಿರ್ಮಾಣ
30. ಮನೆ ಸಂಪರ್ಕ
31. ಮರಳಿ ಶಾಲೆಗೆ ಕಾರ್ಯಕ್ರಮ
32. ಗ್ರಾಮ ವಿಕಾಸ
33. ಸಾಮರಸ್ಯ ಸಹಭೋಜನ
34. ಸರಯೂ–ಮಾಸಪತ್ರಿಕೆ
35. ಆಪ್ತ ಸಲಹೆ
36. ಸ್ವಚ್ಛತಾ ಅಭಿಯಾನಗಳು
37. ಕುಟುಂಬ ಮಿಲನಗಳು
38. ಸ್ವದೇಶಿ ಸಪ್ತಾಹ
39. ಗ್ರಾಮ ಸರ್ವೇಕ್ಷಣೆ
40. ಸರಕಾರಿ ಶಾಲಾ ಪೋಷಣೆ

## ಗಣಿತ ಸಂಖ್ಯಾ ಬಂಧ

**(ಮೇಲಿನಿಂದ ಕೆಳಕ್ಕೆ)**

1. 81ರ ಎರಡು ಸಮಅಪವರ್ತನಗಳನ್ನು '7'ರ ಜೊತೆಯಲ್ಲಿ ಕೂಡಿಸಿದಾಗ ಬರುವ ಉತ್ತರ
2. ಮೊದಲ ಅಂಕಿ ಒಂದು ಪೂರ್ಣ ವರ್ಗ ಸಂಖ್ಯೆ. ಎರಡನೆ ಅಂಕಿ ಮೊದಲ ಅಂಕಿಯ ಎರಡರಷ್ಟಿವೆ.




**ಎಡದಿಂದ ಬಲಕ್ಕೆ**

2ನೇ ಅಂಕಿಯ ಮೊದಲನೇ ಅಂಕಿಯ 3ರಷ್ಟಿರುವ ಸಂಖ್ಯೆಯ ವರ್ಗ

ಈ ಸಂಖ್ಯೆಯ ಒಂದು ಪೂರ್ಣ ಘನವೂ ಹೌದು ಮತ್ತು ಪೂರ್ಣ ವರ್ಗವೂ ಹೌದು.

---

## ಮತಿಗೆ ಮಾಹಿತಿ

# ಸಪ್ತ ಸ್ವರಗಳು

ಒಟ್ಟು ಏಳು ಸ್ವರಗಳು
ಷಡ್ಜಮ್
ಋಷಭಮ್
ಗಾಂಧಾರಂ
ಮಧ್ಯಮಮ್
ಪಂಚಮಮ್
ಧೈವತಮ್
ನಿಶಾಧಮ್
ಇವುಗಳನ್ನು ಚುಟುಕಾಗಿ ಸ, ರಿ, ಗ, ಮ, ಪ, ಧ, ನಿ ಎನ್ನುತ್ತೇವೆ.
ಸಂಗೀತದ ಎಲ್ಲಾ ರಾಗಗಳಿಗೆ ಈ ಸ್ವರಗಳೇ ಮೂಲ. ಸಂಗೀತ ರತ್ನಾಕರ ಎಂಬ ಪ್ರಾಚೀನ ಗ್ರಂಥದಲ್ಲಿ ಇದರ ವಿವರಣೆ ಇದೆ.

